ಸಂಪುಟ 01 | ಸಂಚಿಕೆ 153 | ಶನಿವಾರ 25 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಮಲೇರಿಯಾ ದಿನ**

ಮಲೇರಿಯಾ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸಲು, ಅದನ್ನು ಹೇಗೆ ನಿಯಂತ್ರಿಸುವುದು ಮತ್ತು ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಹೇಗೆ ಎಂಬುದರ ಕುರಿತು ಜಾಗೃತಿ ಮೂಡಿಸಲು ಪ್ರತಿ ವರ್ಷ ಏಪ್ರಿಲ್ 25 ರಂದು ವಿಶ್ವ ಮಲೇರಿಯಾ ದಿನವನ್ನು ಆಚರಿಸಲಾಗುತ್ತದೆ. 2008 ರಲ್ಲಿ, ಮೊದಲ ಮಲೇರಿಯಾ ದಿನವನ್ನು ಆಚರಿಸಲಾಯಿತು, ಇದನ್ನು ಆಫ್ರಿಕಾ ಮಲೇರಿಯಾ ದಿನದಿಂದ ಅಭಿವೃದ್ಧಿಪಡಿಸಲಾಯಿತು, ಇದನ್ನು 2001 ರಿಂದ ಆಫ್ರಿಕನ್ ಸರ್ಕಾರಗಳು ಆಚರಿಸುತ್ತಿವೆ. 2007 ರಲ್ಲಿ ವಿಶ್ವ ಆರೋಗ್ಯ ಸಭೆಯ 60 ನೇ ಅಧಿವೇಶನದಲ್ಲಿ, ಆಫ್ರಿಕಾ ಮಲೇರಿಯಾ ದಿನವನ್ನು ವಿಶ್ವ ಮಲೇರಿಯಾ ದಿನವೆಂದು ಬದಲಾಯಿಸಲು ಪ್ರಸ್ತಾಪಿಸಲಾಯಿತು.

**2) ವಿಶ್ವ ಪೆಂಗ್ವಿನ್ ದಿನ**

ವಿಶ್ವ ಪೆಂಗ್ವಿನ್ ದಿನವನ್ನು ವಾರ್ಷಿಕವಾಗಿ ಏಪ್ರಿಲ್ 25 ರಂದು ಆಚರಿಸಲಾಗುತ್ತದೆ. ಈ ದಿನವು ಪೆಂಗ್ವಿನ್‌ಗಳ ಸಂರಕ್ಷಣೆ ಮತ್ತು ಈ ವರ್ಚಸ್ವಿ ಪಕ್ಷಿಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ರಕ್ಷಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತದೆ. ಇದು ಅಂಟಾರ್ಕ್ಟಿಕಾದಲ್ಲಿ ಅಡೆಲೀ ಪೆಂಗ್ವಿನ್‌ಗಳ ವಾರ್ಷಿಕ ಉತ್ತರ ವಲಸೆಯೊಂದಿಗೆ ಹೊಂದಿಕೆಯಾಗುತ್ತದೆ.

## ಸುಭಾಷಿತ

ಜನರನ್ನು ಪ್ರತ್ಯೇಕಿಸುವುದು ಧರ್ಮದ ಉದ್ದೇಶ ಅಲ್ಲ. ವಿವಿಧ ಜನರ ನಡುವೆ ಸ್ನೇಹಭಾವನೆ ಮೂಡಿಸುವುದೇ ಧರ್ಮದ ಧ್ಯೇಯ.

–ಮಹಾತ್ಮ ಗಾಂಧೀಜಿ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಬೆಂಗಳೂರಿನ ಪ್ರಗತಿಗೆ ಅಡ್ಡಿಯಾಗಿರುವ ಕಟ್ಟಡಗಳ ಎತ್ತರ ನಿರ್ಬಂಧ ಸಡಿಲಿಕೆಗೆ ಕೇಂದ್ರಕ್ಕೆ ಡಿಕೆಶಿ ಮನವಿ

**ನವದೆಹಲಿ: ರಕ್ಷಣಾ ಇಲಾಖೆ ವಿಮಾನ ನಿಲ್ದಾಣಗಳ ಸುತ್ತಮುತ್ತಲ ಪ್ರದೇಶದಲ್ಲಿ ವಿಧಿಸಲಾಗಿರುವ ಕಟ್ಟಡಗಳ ಎತ್ತರದ ನಿರ್ಬಂಧ ಬೆಂಗಳೂರಿನ ಪ್ರಗತಿಗೆ ಅಡ್ಡಿಯಾಗಿದ್ದು, ಸುರಕ್ಷತೆ ಹಾಗೂ ಪ್ರಗತಿಯ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಿರ್ಬಂಧಗಳನ್ನು ಸಡಿಲಗೊಳಿಸಿ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಿದರು.**

ನವದೆಹಲಿಯಲ್ಲಿ ಅವರು ಕೇಂದ್ರ ಸಚಿವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿ, ಮನವಿ ಪತ್ರ ಸಲ್ಲಿಸಿದರು. ಬೆಂಗಳೂರಿನ ರಕ್ಷಣಾ ಇಲಾಖೆ ಸುಪರ್ದಿಯ ವಿಮಾನ ನಿಲ್ದಾಣಗಳ 20 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ವಿಮಾನ ನಿಲ್ದಾಣದ ಅಧಿಕಾರಿಗಳು ವಿಪರೀತ ನಿರ್ಬಂಧಗಳನ್ನು ವಿಧಿಸುತ್ತಿದ್ದಾರೆ. ಬೆಂಗಳೂರು ವಿಶ್ವದ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಹೆಚ್‌ಎಎಲ್ ವಿಮಾನ ನಿಲ್ದಾಣ ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ ಹೆಚ್ಚುವರಿಯಾಗಿ ವಿಧಿಸಲಾಗಿರುವ ನಿರ್ಬಂಧಗಳು ಈ ಪ್ರದೇಶಗಳಲ್ಲಿ ಅಭಿವೃದ್ಧಿಗೆ



ಅಡ್ಡಿಯಾಗಿವೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಈ ವಿಚಾರವಾಗಿ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿಗಳು, ರಕ್ಷಣಾ ಸಚಿವಾಲಯದ ರಕ್ಷಣಾ ಉತ್ಪಾದನಾ ಇಲಾಖೆ ಕಾರ್ಯದರ್ಶಿಗಳು ಹಾಗೂ ರಕ್ಷಣಾ ಕಾರ್ಯದರ್ಶಿಗಳಿಗೆ ಪತ್ರಗಳನ್ನು ಬರೆಯಲಾಗಿದೆ. ವಿಮಾನ ಸುರಕ್ಷತೆ ಹಾಗೂ ನಗರದ ಅಭಿವೃದ್ಧಿ ಎರಡರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ನಡೆಸಿ, ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಎಂದು ಮನವಿ ಮಾಡಿದ್ದಾರೆ.

ಪ್ರಸ್ತುತ ಬೆಂಗಳೂರಿನಲ್ಲಿ ನಾಲ್ಕು ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಹೆಚ್‌ಎಎಲ್ ಹಾಗೂ ಯಲಹಂಕ ವಾಯುನೆಲೆ ರಕ್ಷಣಾ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ವಿಮಾನ ನಿಲ್ದಾಣಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮಾಡಲು ವಿಮಾನ ನಿಲ್ದಾಣ ಅಧಿಕಾರಿಗಳಿಂದ ನಿರಾಕ್ಷೇಪಣ ಪತ್ರ ಪಡೆಯಬೇಕಾಗಿದೆ. ವಿಮಾನ ನಿಲ್ದಾಣದ ಸುತ್ತಮುತ್ತಲ 15 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡಗಳ ಎತ್ತರದ ಮಿತಿಯನ್ನು 150 ಮೀ. ನಿಗದಿಪಡಿಸಲಾಗಿದೆ ಎಂದು ಜಿ.ಎಸ್. ಆರ್ 751 (ಇ) ನಿಯಮದಲ್ಲಿ ಸೂಚಿಸಲಾಗಿದೆ. ಆದರೆ ರಕ್ಷಣಾ ಇಲಾಖೆ ವಿಮಾನ ನಿಲ್ದಾಣಗಳು ಈ ವಿಪರೀತ ನಿರ್ಬಂಧ ಹೇರುವುದರ ಜತೆಗೆ 150 ಮೀ. ಎತ್ತರದ ಮಿತಿಯನ್ನು 15 ಕಿ.ಮೀ ಮೀರಿ 20 ಕಿ.ಮೀ ವರೆಗೂ ವಿಸ್ತರಿಸಿವೆ. ಈ ನಿರ್ಬಂಧಗಳು ಈ ಬೆಂಗಳೂರು ನಗರದ ಪ್ರಗತಿಗೆ ಮಾರಕವಾಗಿವೆ.

ಸಿಂಗಾಪುರ, ಆಂಸ್ಟ್ರಡಾಮ್, ಡಲ್ಲಾಸ್, ಲಂಡನ್ ಹಾಗೂ ದುಬೈ ಸೇರಿದಂತೆ ಅನೇಕ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ಕಚೇರಿ, ಮನರಂಜನೆ ಸೇರಿದಂತೆ ವಿವಿಧೋದ್ದೇಶಕ್ಕೆ ಬಳಸಲಾಗುತ್ತಿದೆ. ಈ ನಗರಗಳಲ್ಲಿ ವಿಮಾನ ನಿಲ್ದಾಣಗಳು ಕೇವಲ ಸಂಚಾರ ಉದ್ದೇಶಕ್ಕೆ ಮಾತ್ರವಲ್ಲದೇ ಉದ್ಯೋಗದ ಕೇಂದ್ರವಾಗಿ ನಗರ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ.

## ಮುಸ್ಲಿಂ ಸಮಾಜದ ಜನಸಂಖ್ಯೆಗೆ ಅನುಗುಣವಾಗಿ ಪಕ್ಷದ ಟಿಕೆಟ್ ನೀಡಬೇಕು: ಅಬ್ದುಲ್ ಗನಿ ಸಾಬ್




**ನೈಜ್ಯ ದೆಸೆ ನ್ಯೂಸ್**

**ಸ್ವಾತಂತ್ರ್ಯ ಪೂರ್ವದಿಂದ ಇಂದಿನವರೆಗೂ ಈ ಭಾರತ ದೇಶದ ಮುಸ್ಲಿಂ ಸಮುದಾಯ ನಿರಂತರ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುತ್ತಾ ಬಂದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಕೋಮುವಾದಿ ಶಕ್ತಿಗಳ ಪ್ರಭಾವ ಹೆಚ್ಚಾಗಿದೆ.ಕಾರಣ ಕಾಂಗ್ರೆಸ್ ಪಕ್ಷದಲಿರುವ ಮುಸ್ಲಿಂ ಮುಖಂಡರುಗಳನ್ನು ತುಳಿಯುವ ಪ್ರಯತ್ನ ಇತ್ತೀಚಿನ ರಾಜಕೀಯ ಬೆಳವಣಿಗೆಯಲ್ಲಿ ಹೆಚ್ಚಾಗಿ ಕಂಡು ಬಂದಿದ್ದು, ಇದಕ್ಕೆ ಉದಾಹರಣೆ ದಾವಣಗೆರೆ ಉಪಚುನಾವಣೆ ಎಂದು ಮುಸ್ಲಿಂ ಮುಖಂಡರು ಹಾಗೂ ವಕೀಲರಾದ ಅಬ್ದುಲ್ ಗನಿ ಸಾಬ್ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಶೇ.95 ರಷ್ಟು ಮುಸ್ಲಿಂ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದರಿಂದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದ್ದು, ಇದು ಸತ್ಯಸಂಗತಿ. ದಾವಣಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಮುದಾಯದ ಮತದಾರರು 93 ಸಾವಿರಕ್ಕಿಂತಲೂ ಹೆಚ್ಚಿದ್ದು, ಹೀಗಾಗಿ ಮುಸ್ಲಿಂರಿಗೆ ಟಿಕೆಟ್ ಕೇಳಲಾಗಿತ್ತು. ಹೈಕಮಾಂಡ್ ದಿ.ಶಾಮನೂರು ಶಿವಶಂಕ್ರಪ್ಪ ಅವರ ಕುಟುಂಬಕ್ಕೆ ಟಿಕೆಟ್ ನೀಡಿ, ಪ್ರಭಾವಶಾಲಿ ಹಾಗೂ ಕ್ರಿಯಾಶೀಲ ಮುಸ್ಲಿಂ ಮುಖಂಡರಗಳಿಂದ ರಾಜಿನಾಮೆ ತೆಗೆದು ಕೊಳ್ಳುವ ಕ್ರಮ ಎಷ್ಟರಮಟ್ಟಿಗೆ ಸರಿ.

ಒಂದುವೇಳೆ ಮುಸ್ಲಿಂ ಮತದಾರರು ಕಾಂಗ್ರೆಸ್ ಪಕ್ಷದಿಂದ ದೂರವಾದರೆ ದೇಶದಾದ್ಯಂತ ಕಾಂಗ್ರೆಸ್ ದೂಳಿಪಟವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ಮುಸ್ಲಿಂ ಸಮಾಜದ ಜನಸಂಖ್ಯೆಗೆ ಅನುಗುಣವಾಗಿ ಪಕ್ಷದ ಟಿಕೆಟ್ ನೀಡಬೇಕೆಂಬ ಅಭಿಪ್ರಾಯವಾಗಿದೆ. ಇದರಿಂದಾಗಿ ಸಾಮಾಜಿಕ ನ್ಯಾಯ ಕೊಟ್ಟಂತಾಗುತ್ತದೆ ಎಂದರು. ಈ ವೇಳೆ: ವಾಜೀದ್ ಖಾನ್, ಸೈಯದ್ ಫಾರೂಕ್ ಹುಸೇನ್, ದಾವೂದ್ ದೋಟಿಹಾಳ, ಬಾಬಾ, ಹಾಗೂ ಸೈಯದ್ ರಫಿಹೂದ್ದೀನ್ ಖಾದ್ರಿ, ಸೇರಿದಂತೆ ಅನೇಕರಿದ್ದರು.

## ನನ್ನನ್ನು ಬೇಕಾದರೆ ನಿಂದಿಸಿ,ಕಲಬುರಗಿ ಮಕ್ಕಳನ್ನು ಅಪಹಾಸ್ಯ ಮಾಡಬೇಡಿ :ಪ್ರಿಯಾಂಕ್ ಖರ್ಗೆ

**ನೈಜ್ಯ ದೆಸೆ ನ್ಯೂಸ್**



**ಬೆಂಗಳೂರು: ಈ ಬಾರಿಯ ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲಿ ಕಲಬುರಗಿ ಜಿಲ್ಲೆಗೆ ಕೊನೆಯ ಸ್ಥಾನ ಬಂದಿದೆ. ಇದನ್ನು ಉಲ್ಲೇಖಿಸಿ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿವೆ. ಸೋಲಿನಲ್ಲೂ ಒಂದು ಪರಿಪೂರ್ಣ ದಾಖಲೆ. ಟ್ವೀಟ್ ಎಲ್ಲಿ ಮಹಾಜ್ಞಾನಿ ಎಂದು ಲೇವಡಿ ಮಾಡಿವೆ.**

ಈ ಕುರಿತು ಪ್ರತಿಕ್ರಿಯಿಸಿರುವ ಪ್ರಿಯಾಂಕ್ ಖರ್ಗೆ, ಕಲಬುರಗಿಯ ವಿದ್ಯಾರ್ಥಿಗಳನ್ನು ಅವಮಾನಿಸುತ್ತಿರುವ ಬಿಜೆಪಿ, ಅವರ ಆತ್ಮಸ್ಥೈರ್ಯವನ್ನು, ಆತ್ಮವಿಶ್ವಾಸವನ್ನು ಅಡಗಿಸುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ನಿಮಗೆ ಸಮಸ್ಯೆ ಇದ್ದರೆ ನನ್ನನ್ನು ನಿಂದಿಸಿ, ಕಲಬುರಗಿಯ ಮಕ್ಕಳನ್ನು ಅಪಹಾಸ್ಯ ಮಾಡುತ್ತಿರುವುದೇಕೆ? ಎಂದು ಪ್ರಶ್ನಿಸಿದ್ದಾರೆ. ಜಿಲ್ಲೆಯ ಶೇಕಡಾವಾರು ಫಲಿತಾಂಶ ಶೇ.85 ಇರಬಹುದು, ಕಳೆದ ಶೈಕ್ಷಣಿಕ ವರ್ಷಕ್ಕಿಂತ ಈ ಬಾರಿ ರಾಜ್ಯ ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ಶೈಕ್ಷಣಿಕ ಗುಣಮಟ್ಟದ ಸುಧಾರಣೆ ಮಾಡಿಕೊಳ್ಳುವ ಶಕ್ತಿ ನಮ್ಮ ಜಿಲ್ಲೆಯ ಮಕ್ಕಳಲ್ಲಿದ್ದು, ಅದು ಸಾಧ್ಯವಾಗುತ್ತದೆ ಎಂದಿದ್ದಾರೆ.

ಪ್ರತಿ ಬಾರಿಯೂ ಕಲಬುರಗಿ ಜಿಲ್ಲೆಯ ಮಕ್ಕಳನ್ನು ಅವಮಾನಿಸುತ್ತಿರುವ ಬಿಜೆಪಿ ರಾಜಕೀಯ ದಿವಾಳಿತನದೊಂದಿಗೆ ನೈತಿಕ ಪ್ರಜ್ಞೆಯೂ ದಿವಾಳಿಯಾಗಿರುವುದನ್ನು ನಿರೂಪಿಸುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿನ ಬಿಜೆಪಿ ನಾಯಕರ ಮತ್ತು ಕಾರ್ಯಕರ್ತರ ಮಕ್ಕಳಿಗೂ "ದಡ್ಡರು" ಎಂಬ ಹಣೆಪಟ್ಟಿಯನ್ನು ಬಿಜೆಪಿ ಕಟ್ಟುತ್ತಿದೆಯೇ? ಜಿಲ್ಲೆಯ ಮಕ್ಕಳ ಮನಸಿನ ಮೇಲೆ ದುಷ್ಪರಿಣಾಮ ಬೀರುವಂತಹ ಮಾತುಗಳನ್ನಾಡುತ್ತಿರುವ ಬಿಜೆಪಿಗೆ ಕನಿಷ್ಠ ಸಾಮಾನ್ಯ ಪ್ರಜ್ಞೆ ಇಲ್ಲದಿರುವುದು ನಾಡಿನ ದುರಂತ ಎಂದಿದ್ದಾರೆ. ಕಲಬುರಗಿ ಜಿಲ್ಲೆಯ ಮಕ್ಕಳ ಶ್ರಮವನ್ನು, ಅವರ ಬೌದ್ಧಿಕ ಸಾಮರ್ಥ್ಯವನ್ನು ಅವಮಾನಿಸುವ, ಅವರ ಆತ್ಮವಿಶ್ವಾಸವನ್ನು ಕುಗ್ಗಿಸುವ ಕೆಲಸವನ್ನು ಬಿಜೆಪಿ ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

## ನ ಯೋ ಪ್ರಾ ಕಚೇರಿಯ ಕಟ್ಟಡ ಕಾಮಗಾರಿ ಭೂಮಿ ಪೂಜೆ , ಗುಣಮಟ್ಟದ ಕಾಮಗಾರಿ ಕೈಗೊಳ್ಳಲು ಎಂಎಲ್‌ಸಿ ಬಯ್ಯಾಪೂರ ಸೂಚನೆ

**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ನಗರದ ಅಭಿವೃದ್ಧಿ ದೃಷ್ಟಿಯಿಂದ ಈ ಕಚೇರಿ ನಿರ್ಮಾಣ ಅತ್ಯಂತ ಅಗತ್ಯವಾಗಿದ್ದು, ಸಾರ್ವಜನಿಕರಿಗೆ ಸುಗಮ ಸೇವೆ ಒದಗಿಸುವ ಉದ್ದೇಶದಿಂದ ಈ ಯೋಜನೆ ಕೈಗೊಳ್ಳಲಾಗಿದೆ. ಸರ್ಕಾರದ ಅನುದಾನದಿಂದ ನಿರ್ಮಾಣಗೊಳ್ಳುವ ಈ ಕಟ್ಟಡವು ಜನರಿಗೆ ಉಪಯುಕ್ತವಾಗಲಿದೆ.**

ಆಡಳಿತ ಕಾರ್ಯಗಳು ವೇಗವಾಗಿ ನಡೆಯಲು ಇದು ನೆರವಾಗುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ ಹೇಳಿದರು.ಪಟ್ಟಣದಲ್ಲಿ ನಗರ ಯೋಜನಾ ಪ್ರಾಧಿಕಾರದ ಕಚೇರಿ



ಕಟ್ಟಡ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಾಮಗಾರಿ ಭೂಮಿ ಪೂಜೆ ನೆರವೇರಿಸಿ ಗುಣಮಟ್ಟದೊಂದಿಗೆ ಹಾಗೂ ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳಬೇಕು. ಗುತ್ತೆದಾರರು ಯಾವುದೇನಿರ್ಲಕ್ಷ್ಯ ತೋರದೆ ನಿಯಮನುಸಾರ ಕಟ್ಟಡ ನಿರ್ಮಾಣ ಮಾಡಬೇಕು ಎಂದು ಸೂಚಿಸಿದರು. ಈ ಯೋಜನೆಗೆ ಸಹಕರಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದ ಅವರು ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದರು.

# ನಮ್ಮ ಕಾರುಣ್ಯಾಶ್ರಮದ ಸೇವೇಯು ನಮಗೆ ಹೆಮ್ಮೆ ಎನಿಸುತ್ತಿದೆ :ಗೀತಾ ಕೋಡಿಹಳ್ಳಿ

**ನೈಜ್ಯ ದೆಸೆ ನ್ಯೂಸ್**



**ಸಿಂಧನೂರು: ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ತಿಳವಳ್ಳಿ ಗ್ರಾಮದ ಕೋಡಿಹಳ್ಳಿ ಕುಟುಂಬದ ಕೋಡಿಹಳ್ಳಿ ಕಲಾ ಸೇವಾ ಸಂಸ್ಥೆಯ ಸ್ಥಾಪಕರು ಹಾಗೂ ಹಾವೇರಿ ಜಿಲ್ಲಾ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಪುಟ್ಟರಾಜ ಕೋಡಿಹಳ್ಳಿ ಗೀತಾ ಕೋಡಿಹಳ್ಳಿ ಈ ದಂಪತಿಗಳ 25ನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮ ಅಶ್ರಮದಲ್ಲಿ ಆಶ್ರಯದಾತರುಗಳಿಗೆ ಹೊಸ ವಸ್ತ್ರಗಳನ್ನು ವಿತರಿಸಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.**

ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಆದರ್ಶ ದಂಪತಿಗಳಾದ ಗೀತಾ ಕೋಡಿಹಳ್ಳಿ ಡಾ. ಪುಟ್ಟರಾಜ ಕೋಡಿಹಳ್ಳಿ ಈ ದಂಪತಿಗಳನ್ನು ಗೌರವಿಸಿ ಶುಭ ಹಾರೈಸಿ ಆಶೀರ್ವದಿಸಲಾಯಿತು. ಈ ಸಮಾರಂಭದಲ್ಲಿ ತಿಳವಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಗಳಾದ ಗೀತಾ ಕೋಡಿಹಳ್ಳಿ ಮಾತನಾಡಿ ಈ ಕಾರುಣ್ಯ ಸಂಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುತ್ತಿರುವುದು ಇಲ್ಲಿರುವ ಎಲ್ಲಾ ಹಿರಿಯರನ್ನು ವಯಸ್ಕರ ಬುದ್ಧಿಮಾಂದ್ಯರನ್ನು ಸ್ವಂತ ಕುಟುಂಬದ ಹಾಗೆ ನೋಡಿಕೊಳ್ಳುತ್ತಿರುವುದು. ನಮ್ಮ ಕುಟುಂಬದ ಘನತೆ ಗೌರವವನ್ನು ಹೆಚ್ಚಿಸಿದ. ಮತ್ತು ವಿಶೇಷವಾಗಿ ನಮ್ಮ ಪತಿಯವರು ಈ ಸಂಸ್ಥೆಯಲ್ಲಿ ಮಾರ್ಗದರ್ಶಕರಾಗಿ ಯಜಮಾನರಾಗಿ ಈ ರೀತಿಯ ಸೇವೆ ಮಾಡುತ್ತಿರುವುದು. ನಮ್ಮ ಕುಟುಂಬ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಸ್ಪೂರ್ತಿಯಾಗಿದೆ.

ಎಷ್ಟೇ ದೂರವಿದ್ದರೂ ಕೂಡ ನಮ್ಮ ಈ ಕುಟುಂಬದ ಹಿರಿಯ ಮನಸ್ಸುಗಳು ನಮ್ಮೆಲ್ಲಾ ಬಂಧು ಬಳಗ ಕಾರುಣ್ಯ ಕುಟುಂಬದ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುತ್ತಿರುವ ಈ ಕಾರ್ಯ ಮಾನವೀಯತೆಗೆ ಮೆರುಗು ತಂದಿದೆ. ಭಾರತೀಯ ಸಂಸ್ಕಾರ ಸಂಸ್ಕೃತಿಯನ್ನು ಉಳಿಸುವುದೇ ನಮ್ಮ ಕಾರುಣ್ಯಾಶ್ರಮದ ಮೂಲ ಉದ್ದೇಶವಾಗಿದೆ. ಈ ಸೇವೆಯ ಜೊತೆ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಹೆತ್ತವರನ್ನು ನೋಡಿಕೊಳ್ಳಲೇಬೇಕು ಎನ್ನುವ ಹಲವಾರು ಅಭಿಯಾನಗಳು ನಮ್ಮ ಈ ಸಂಸ್ಥೆಯ ನಿರಂತರ ಅಭಿಯಾನಗಳಾಗಿವೆ.

ನಮ್ಮ ಕಾರುಣ್ಯ ಆಶ್ರಮದ ಸೇವೆಯು ನಮಗೆ ಹೆಮ್ಮೆ ಎನಿಸುತ್ತಿದೆ. ಅದೆಷ್ಟೋ ನೊಂದ ಜೀವಿಗಳ ನೆಲೆ ಇಲ್ಲದ ಜೀವಿಗಳಿಗೆ ನಾವುಗಳು ಮಕ್ಕಳಾಗಿ ಮೊಮ್ಮಕ್ಕಳಾಗಿ ಬಂಧುಗಳಾಗಿ ಇವರ ಜೊತೆಗಿರುವುದೇ ನಮಗೆ ಸಂತೋಷ ಈ ಸೇವಾ ಕಾರ್ಯಕ್ಕೆ ಕೈಜೋಡಿಸಿರುವ ಎಲ್ಲಾ ಮಹಾದಾನಿಗಳಿಗೆ ಕೋಡಿಹಳ್ಳಿ ಕುಟುಂಬದ ವತಿಯಿಂದ ಧನ್ಯವಾದಗಳು ಹಾವೇರಿ ಜಿಲ್ಲೆಯ ಪ್ರತಿಯೊಂದು ಮನೆ ಮನಸುಗಳಲ್ಲಿ ದೇವಸ್ಥಾನದಂತಿರುವ ನಮ್ಮ ಕಾರುಣ್ಯ ಆಶ್ರಮವು ಪವಿತ್ರ ಹೃದಯ ಶ್ರೀಮಂತಿಕೆಯ ಮಂದಿರವಾಗಿದೆ. ನಾನು ನನ್ನದು ನನ್ನಿಂದಲೇ ಎನ್ನುವ ಈ ಸ್ವಾರ್ಥ ಜಗತ್ತಿನಲ್ಲಿ ನಿಸ್ವಾರ್ಥತೆಯ ಪಯಣವೇ ನಮ್ಮ ನಿರಂತರ ಬದುಕು ನಾನು ಕೂಡ ನಮ್ಮ ಪತಿಯವರ ಜೊತೆ ಕಾರುಣ್ಯ ಕುಟುಂಬದ ಪದಾಧಿಕಾರಿಗಳ ಮತ್ತು ಸಿಬ್ಬಂದಿಗಳ ಜೊತೆ ನಿರಂತರವಾಗಿ ಈ ಸೇವೆಯಲ್ಲಿ ಪಾಲ್ಗೊಳ್ಳುತ್ತೇನೆ.

ಆದಷ್ಟು ಸರ್ಕಾರ ಕಾರುಣ್ಯ ಕುಟುಂಬದ ಸೇವೆಯ ಬಗ್ಗೆ ದೃಢ ದೃಷ್ಟಿ ಹರಿಸಿ ಸ್ವಂತ ಜಾಗ ಅನುದಾನ ನೀಡಿದಲ್ಲಿ ಇನ್ನೂ ಹೆಚ್ಚಿನ ಸೇವೆ ಮಾಡಲು ಅವಕಾಶ ದೊರೆಯುತ್ತದೆ ಎಂದು ಭಾವನಾತ್ಮಕವಾಗಿ ಮಾತನಾಡಿ ಎಲ್ಲಾ ವೃದ್ಧರಿಗೆ ಆತ್ಮಸ್ಥೈರ್ಯ ತುಂಬಿದರು. ಈ ಕಾರ್ಯಕ್ರಮದಲ್ಲಿ ಡಾ. ಪುಟ್ಟರಾಜ ಕೋಡಿಹಳ್ಳಿ. ಕೋಡಿಹಳ್ಳಿ ಕಲಾ ಸೇವಾ ಸಂಸ್ಥೆ (ರಿ) ತಿಳವಳ್ಳಿ ತಾ. ಹಾನಗಲ್. ಜಿ. ಹಾವೇರಿ ಹಾಗೂ ಹಾವೇರಿ ಜಿಲ್ಲಾ ಕಾರ್ಯಾಧ್ಯಕ್ಷರು ಕಾರುಣ್ಯ ಆಶ್ರಮ ಸಿಂಧನೂರು. ಆಶಾ ಹೆಗಡೆ ಸಂಗೊಳ್ಳಿ ಮನೆ ತಾ. ಸಿದ್ದಾಪುರ. ರಾಘವೇಂದ್ರ ಹೆಗಡೆ ಸಂಗೊಳ್ಳಿ ಮನೆ ತಾ. ಸಿದ್ದಾಪುರ. ಧೃವ.ಧನ್ಯಶ್ರೀ. ಹಾಗೂ ಡಾ. ಚನ್ನಬಸವ ಸ್ವಾಮಿ ಹಿರೇಮಠ ಕಾರ್ಯಾಧ್ಯಕ್ಷರು ಕಾರುಣ್ಯ ಆಶ್ರಮ. ಸುಜಾತ ಹಿರೇಮಠ ಸದಸ್ಯರು ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತಾ ಮಲದಗುಡ್ಡ.ಸಿದ್ದಯ್ಯ ಸ್ವಾಮಿ.ಮರಿಯಪ್ಪ.ಜ್ಯೋತಿ. ಮೀನಾಕ್ಷಿಮ್ಮ. ಲಕ್ಷ್ಮಿ ಮತ್ತು ಹಾನಗಲ್ ತಾಲೂಕ ತಿಳವಳ್ಳಿಯ ಅಪಾರ ಕೋಡಿಹಳ್ಳಿ ಕುಟುಂಬದ ಗುರುಹಿರಿಯರುಗಳು ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

"ಅವ್ವ"

ಒಂಬತ್ತು ತಿಂಗಳು ಹೊತ್ತು, ನೋವನ್ನೇ ನಗು ಮಾಡಿ
ಜಗಕೆ ನನ್ನ ತೋರಿಸಿದವಳು ನೀನು ಅವ್ವ
ಹಸಿವು ಅಂದ್ರೆ ಏನು ಅಂತ ಗೊತ್ತಾಗದಂಗೆ
ನಿನ್ನ ಪಾಲಿನ ತುತ್ತು ನನಗೆ ಉಣಿಸಿದವಳು ನೀನು ಅವ್ವ

ಶಾಲೆಗೆ ಮೊದಲ ದಿನ ಕಳಿಸೋವಾಗ
ಕಣ್ಣೀರು ತಡೆದು ನಕ್ಕಿದ್ದೆ ನೀನು
ಆ ಕಣ್ಣೀರ ಹಿಂದಿನ ಭಯ, ಪ್ರೀತಿ, ಆಸೆ
ಈಗ ಅರ್ಥ ಆಗ್ತೈತೆ ಕಣೆ ಅವ್ವ

ನಾನು ಬಿದ್ದಾಗ ನನಗಿಂತ ಜೋರಾಗಿ ಅತ್ತೆ ನೀನು
ನಾನು ಗೆದ್ದಾಗ ನನಗಿಂತ ಜೋರಾಗಿ ಕುಣಿದೆ ನೀನು
ನನ್ನ ಸೋಲು-ಗೆಲುವು ಎಲ್ಲ ನಿನ್ನದೇ ಆಗಿತ್ತು
ನೀನು ಇಲ್ಲದೆ ನಾನು ಏನೂ ಅಲ್ಲ ಕಣೆ ಅವ್ವ

ಬಿಸಿಲಲ್ಲಿ ದುಡಿದು ಸುಸ್ತಾಗಿ ಬಂದು
"ಊಟ ಆಯ್ತಾ ಮಗನೇ?" ಅಂತ ಕೇಳೋ ನಿನ್ನ ದನಿ
ಸಾಯಿ ಗುಡಿ ಗಂಟೆಗಿಂತ ಪವಿತ್ರ ಕಣವ್ವ
ಅದೇ ನನ್ನ ಪಾಲಿನ ದೇವರ ಆಶೀರ್ವಾದ

ಈಗ ನಾನು ದೊಡ್ಡ ಮನುಷ್ಯ ಅಂತ ಊರಿಗೆಲ್ಲ ಗೊತ್ತು
ಸ್ಟೇಜ್ ಮೇಲೆ ನಿಂತು ನೂರು ಜನ ಚಪ್ಪಾಳೆ ತಟ್ಟ್ತಾರೆ
ಆದ್ರೆ ಮನೆಗೆ ಬಂದಾಗ ಮಾತ್ರ ಗೊತ್ತು
ನಿನ್ನ ಸೆರಗಿನ ನೆರಳೇ ನನ್ನ ದೊಡ್ಡ ವೇದಿಕೆ ಅಂತ

ಅವ್ವಾ... ಒಂದು ವರ ಕೊಡು
ಮುಂದಿನ ಜನ್ಮ ಅಂತ ಇದ್ರೆ
ನಿನ್ನ ಹೊಟ್ಟೇಲೇ ಮತ್ತೆ ಹುಟ್ಟಬೇಕು ನಾನು
ನೂರು ಜನ್ಮ ಎತ್ತಿದ್ರೂ ನಿನ್ನ ಋಣ ತೀರಿಸೋಕೆ ಆಗಲ್ಲ

ದೇವರು ಎಲ್ಲಾ ಕಡೆ ಇರೋಕೆ ಆಗಲ್ಲ ಅಂತ
ತಾಯೀರನ್ನ ಸೃಷ್ಟಿ ಮಾಡಿದನಂತೆ
ಅದು ಸುಳ್ಳಲ್ಲ ಕಣವ್ವ
ಯಾಕಂದ್ರೆ ನನ್ನ ಪಾಲಿಗೆ ದೇವರು ನೀನೇ... ನೀನೇ...
ನೀನೇ.

ಎಸ್. ದುರಗಪ್ಪ. ಕುಷ್ಟಗಿ.

# SSLC ಪರೀಕ್ಷೆಯಲ್ಲಿ ಬಳಗಾನೂರಿನ ಬ್ರಿಲಿಯನ್ಸ್ ಬ್ಲಾಸ್ಟ್ ತಾಲ್ಲೂಕು ಮಟ್ಟದಲ್ಲಿ ಡಬಲ್ ಧಮಾಕಾ.

ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲ್ಲೂಕಿನ ಬಳಗಾನೂರು ಪಟ್ಟಣವು ಮತ್ತೊಮ್ಮೆ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಕೀರ್ತಿಯನ್ನು ಎತ್ತಿ ಹಿಡಿದಿದೆ.2025-26ನೇ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೇ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಿದ ವಿದ್ಯಾರ್ಥಿನಿ ಸುಷ್ಮೀತಾ ಶರಣಪ್ಪ ಕುಂಬಾರ ಮತ್ತು ತಾಲೂಕಿಗೇ ದ್ವಿತೀಯ ಸ್ಥಾನ ಪಡೆದ ರಾಘವ್ ಪ್ರಸಾದ್ ತಂ/ವೀರಭದ್ರ ಹಡಪದ್ ಅವರಿಗೆ ಇಂದು ಬಳಗಾನೂರು ಪಟ್ಟಣ ಪಂಚಾಯ್ತಿಯ ಸಭಾಭವನದಲ್ಲಿ ನಡೆದ ಜಾತ್ರಾ ಪೂರ್ವಭಾವಿ ಸಭೆಯಲ್ಲಿ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.


ಈ ಸಾಧಕರನ್ನು ಮಸ್ಕಿ ತಹಸಿಲ್ದಾರರಾದ ಮಂಜುನಾಥ ಬೋಗಾವತಿ,



ಬಳಗಾನೂರು ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳಾದ ಗೋಪಾಲ ನಾಯಕ ,ಛಿ ಎರಿಯಪ್ಪ ಅಂಗಡಿ ವಿವಿದ ಇಲಾಖೆಯ ಅಧಿಕಾರಿಗಳು ಹಾಗೂ ಉಪಾಧ್ಯಕ್ಷ ಹುಸೇನ್ ಭಾಷಾ ಬೂದಗುಂಪಾ ಜೊತೆಗೆ ಪಟ್ಟಣ ಪಂಚಾಯ್ತಿಯ ಸದಸ್ಯರು ಪಟ್ಟಣದ ಮುಖಂಡರು ಸೇರಿ ಗೌರವಪೂರ್ವಕವಾಗಿ ಸನ್ಮಾನಿಸಿ, ಶಾಲೆಗೆ ಹಾಗೂ ಪಟ್ಟಣಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು.ಕಾರ್ಯಕ್ರಮದಲ್ಲಿ ಮಾತನಾಡಿದ ಅಧಿಕಾರಿಗಳು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತಮ್ಮ ಪರಿಶ್ರಮದಿಂದ ಉನ್ನತ ಸಾಧನೆ ಮಾಡಿರುವುದು ಇತರೆ ವಿದ್ಯಾರ್ಥಿಗಳಿಗೆ ಸ್ಪೂರ್ತಿಯಾಗಿದೆ. ಇಂತಹ ಪ್ರತಿಭೆಗಳು ಇನ್ನಷ್ಟು ಬೆಳೆದು ರಾಜ್ಯ ಮಟ್ಟದಲ್ಲೂ ಸಾಧನೆ ಮಾಡಲಿ ಎಂದು ಆಶಿಸಿದರು.

ಸನ್ಮಾನ ಸ್ವೀಕರಿಸಿದ ವಿದ್ಯಾರ್ಥಿಗಳು ತಮ್ಮ ಯಶಸ್ಸಿಗೆ ಶಿಕ್ಷಕರು, ಪೋಷಕರು ಹಾಗೂ ಸ್ನೇಹಿತರ ಬೆಂಬಲವೇ ಮುಖ್ಯ ಕಾರಣ ಎಂದು ಹೇಳಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಗುರಿಗಳನ್ನು ಸಾಧಿಸುವ ಸಂಕಲ್ಪ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು,ಪೋಷಕರು ಹಾಗೂ ಪಟ್ಟಣದ ಗಣ್ಯರು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಬಳಗಾನೂರು ವಿದ್ಯಾರ್ಥಿಗಳ ಈ ಸಾಧನೆ ತಾಲ್ಲೂಕಿನ ಹೆಮ್ಮೆ ಹೆಚ್ಚಿಸಿದ್ದು,ಭವಿಷ್ಯದ ಪ್ರತಿಭೆಗಳಿಗೆ ಪ್ರೇರಣೆಯ ದೀಪವಾಗಿ ಮೂಡಿದೆ.

# ಎಸ್‌ಎಸ್‌ಎಲ್‌ಸಿ: ಸರ್ವೋದಯ ಶಾಲೆಗೆ ಶೇ. 95ರಷ್ಟು ಅದ್ಭುತ ಫಲಿತಾಂಶ




ನೈಜ್ಯ ದೆಸೆ ನ್ಯೂಸ್

ಮಾನವಿ: ನಗರದ ಪ್ರತಿಷ್ಠಿತ ಸರ್ವೋದಯ ಶಿಕ್ಷಣ ಸಂಸ್ಥೆಯ ಪ್ರೌಢಶಾಲಾ ವಿದ್ಯಾರ್ಥಿಗಳು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ತೋರಿದ್ದು, ಶಾಲೆಗೆ ಶೇ. 95ರಷ್ಟು ಅದ್ಭುತ ಫಲಿತಾಂಶ ಲಭಿಸಿದೆ. ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 60 ವಿದ್ಯಾರ್ಥಿಗಳಲ್ಲಿ 9 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್) ಉತ್ತೀರ್ಣರಾಗಿದ್ದಾರೆ.

ಉಳಿದಂತೆ 17 ವಿದ್ಯಾರ್ಥಿಗಳು ಪ್ರಥ-ಮ ದರ್ಜೆ, 18 ವಿದ್ಯಾರ್ಥಿಗಳು ದ್ವಿತೀಯ ದರ್ಜೆ ಹಾಗೂ 13 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ಶಾಲೆಯ ಟಾಪರ್ಸ್: ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಗಳಿಸಿದ್ದು, ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಗಿನಂತಿದೆ: ಪ್ರಥಮ ಸ್ಥಾನ:ಅನ್ನಂ ದಾಸ್ ಶಾಲಿನಿ (ತಂದೆ: ಅನ್ನಂ ದಾಸ್ ದೇವದಾಸ್) ? 594/625 ಅಂಕಗಳು (ಶೇ. 95.04%). ದ್ವಿತೀಯ ಸ್ಥಾನ: ಸೈಯಾದ್ ಕ್ವನಿತಾ ಫಾಹಿಮ್ (ತಂದೆ: ಸೈಯದ್ ಕಮರುದ್ದೀನ್) 574/625 ಅಂಕಗಳು (ಶೇ. 91.84%). ತೃತೀಯ ಸ್ಥಾನ: ಲಾವಣ್ಯ (ತಂದೆ: ಮುನಿಯಪ್ಪ ಅಯ್ಯೋ) **573/625 ಅಂಕಗಳು (ಶೇ. 91.68%).

ಆಡಳಿತ ಮಂಡಳಿ ಹರ್ಷ ಹಾಗೂ ಅಭಿನಂದನೆ: ವಿದ್ಯಾರ್ಥಿಗಳ ಈ ಅತ್ಯುತ್ತಮ ಸಾಧನೆಯನ್ನು ಶ್ಲಾಘಿಸಿರುವ ಸಂಸ್ಥೆಯ ಆಡಳಿತ ಮಂಡಳಿಯು ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ, ಅವರ ಬೆನ್ನೆಲುಬಾಗಿ ನಿಂತ ಪೋಷಕರಿಗೆ ಹಾಗೂ ಸೂಕ್ತ ಮಾರ್ಗದರ್ಶನ ನೀಡಿದ ಶಿಕ್ಷಕ ವೃಂದಕ್ಕೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸಿದೆ. ಈ ಹರ್ಷದ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾದ ಮನೋಜ್ ಕುಮಾರ್ ಮಿಶ್ರಾ, ಅನಿಲ್ ಕುಮಾರ ಹೆಚ್, ಆಂಜನೇಯ ಎಚ್. ಹಾಗೂ ಶಾಲೆಯ ಮುಖ್ಯೋಪಾಧ್ಯಾಯರಾದ ರಂಗಪ್ಪ ಅವರು ಉಪಸ್ಥಿತರಿದ್ದು, ಮಕ್ಕಳ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

## ಕು.ಶ್ವೇತಾ 94.56% ಪ್ರತಿಶತ ಅಂಕ ಪಡೆದು ವೆಂಕಟೇಶ್ವರ ಪ್ರೌಢಶಾಲೆಗೆ ಪ್ರಥಮ ರ್ಯಾಂಕ್.

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ವೆಂಕಟೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿನಿ ಕು.ಶ್ವೇತಾ ತಂದೆ ನಾಗರಾಜ ಸಾಸಲಮರಿ ಎಸ್ ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶದಲ್ಲಿ 625 ಕ್ಕೆ 591 (94.56% ಪ್ರತಿಶತ) ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ.



ಕು.ಶ್ವೇತಾ ಅವರ ತಂದೆ ನಾಗರಾಜ್ ಸಾಸಲಮರಿ ಮಾತನಾಡಿ, ಪುಸ್ತಕ ಹಿಡಿದ ಕೈಗೆ ಗೆಲುವು ತಪ್ಪಲ್ಲ ಎಂಬುದಕ್ಕೆ ನನ್ನ ಮಗಳ ಪ್ರೇರಣೆಯಾಗಿದೆ. ನನ್ನ ಮಗಳು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶಾಲೆಗೆ ಪ್ರಥಮ ರ್ಯಾಂಕ್ ಪಡೆದದ್ದು ನಿಜಕ್ಕೂ ದೊಡ್ಡ ಸಾಧನೆಯಾಗಿದೆ. ಶಾಲೆಯ ಶಿಕ್ಷಕರ ಹಾಗೂ ಮಗಳ ಕಠಿಣ ಪರಿಶ್ರಮದಿಂದಾಗಿ ಇಂದು ಫಲ ಸಿಕ್ಕಿದೆ. ಅವಳ ಈ ಸಾಧನೆಯಿಂದಾಗಿ ನಮ್ಮ ಮನೆತನದ ಗೌರವ ಹೆಚ್ಚಾಗಿದೆ ಹಾಗೂ ನಮ್ಮೆಲ್ಲರಿಗೂ ಹೆಮ್ಮೆ ತಂದಿದೆ. ಅವಳ ಮುಂದಿನ ವಿದ್ಯಾಭ್ಯಾಸದಲ್ಲಿ ಇದೇ ರೀತಿ ಯಶಸ್ಸು ಸಿಗಲಿ ಎಂದು ಶುಭಾ ಹಾರೈಸಿದರು. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಮುಖ್ಯಸ್ಥರು ಹಾಗೂ ಮುಖ್ಯೋಪಾಧ್ಯಾರು ಮತ್ತು ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

# ಏಪ್ರಿಲ್ 30ರಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ರಾಯಚೂರಿನ ಎಲ್.ವಿ.ಡಿ ಕಾಲೇಜಿನಲ್ಲಿ ಏಪ್ರಿಲ್ 30ರ ಬೆಳಗ್ಗೆ 10ಗಂಟೆಯಿಂದ ಸಂಜೆ 4ಗಂಟೆವರೆಗೆ ನೇರ ಸಂದರ್ಶನ ಆಯೋಜಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಕೋರಲಾಗಿದೆ.

## ನೇರ ಸಂದರ್ಶನ

ನೇರ ಸಂದರ್ಶನದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ. ಅರ್ಹತೆಗಳು: ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಆಸಕ್ತ 18 ರಿಂದ 30 ವರ್ಷಗಳ ವರೆಗಿನ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡೆಟಾ, ಆದ-ಾರ್ ಕಾರ್ಡ್ ಪ್ರತಿ, ಭಾವಚಿತ್ರಗನ್ನು ಸಲ್ಲಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಾಲಾಜಿ ಕಾಂಪ್ಲೆಕ್ಸ್, ನೆಲ ಮಹಡಿ, ಗೂಡ್ ಶೆಡ್ ರಸ್ತೆ, ಸ್ಟೇಷನ್ ಏರಿಯಾ, ರಾಯಚೂರು ಹಾಗೂ ದೂರವಾಣಿ ಸಂಖ್ಯೆ 08532-231684, 9916931616, 9008211750ಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ನವೀನ ಕುಮಾರ್ ಸಂಗೇಪಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯಕ್ಕೆ ತೃತೀಯ ಸ್ಥಾನ ಪಡೆದ ಗಂಗಮ್ಮಗೆ ಜಿಲ್ಲಾಧಿಕಾರಿ ಸನ್ಮಾನ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ತಾಲೂಕಿನ ಮೈಲೇಶ್ವರದ ಶ್ರೀ ಮಾರುತಿ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಬ್ರಿಲಿಯಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಗಂಗಮ್ಮ ಅಶೋಕ ಕೋಳೂರ 2025-26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ತೃತೀಯ ಸ್ಥಾನ (623/625) ಪಡೆದಿರುವುದರಿಂದ ವಿಜಯಪುರ ಜಿಲ್ಲಾಧಿಕಾರಿ




ಕೆ.ಆನಂದ ಅವರು ಸನ್ಮಾನಿಸಿ ಗೌರವಿಸಿದರು.

ಶುಕ್ರವಾರ ತಮ್ಮ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಜಿಲ್ಲೆಯಿಂದ ರಾಜ್ಯಮಟ್ಟದಲ್ಲಿ ಉತ್ತಮ ಸಾಧನೆ ಗೈದ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಬ್ರಿಲಿಯಂಟ್ ಪ್ರೌಢಶಾಲೆ ವಿದ್ಯಾರ್ಥಿನಿ ಗಂಗಮ್ಮ ಕೊಳೂರಗೆ ಈ ಸನ್ಮಾನ ನೀಡಲಾಯಿತು. ಈ ಸಂದರ್ಭದಲ್ಲಿ ಜಿಪಂ ಇಸಿಒ ರಿಷಿ ಆನಂದ, ಇಲಾಖೆಯ ಅಧಿಕಾರಿಗಳು ಸಂಸ್ಥೆ ಮುಖ್ಯಸ್ಥರು

# ಡಾ.ರಾಜಕುಮಾರ್ ಅವರ ಸರಳತೆ ಜೀವನದಲ್ಲಿ ಅಳವಡಿಸಿಕೊಳ್ಳಿ: ತಹಶಿಲ್ದಾರ್ ಸುರೇಶ ವರ್ಮಾ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ವರನಟ ಡಾ.ರಾಜಕುಮಾರ್ ಅವರು ಕರ್ನಾಟಕ ಮಾತ್ರವಲ್ಲದೇ ಇಡೀ ದೇಶದ ಹೆಮ್ಮೆಯಾಗಿದ್ದರು. ಅವರ ನಿಷ್ಠೆ, ಪ್ರಾಮಾಣಿಕತೆ, ಸರಳತೆಯನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ರಾಯಚೂರು ತಹಶಿಲ್ದಾರ್ ಸುರೇಶ ವರ್ಮ ಅವರು ಹೇಳಿದರು.**

ಏಪ್ರಿಲ್ 24ರ ಶುಕ್ರವಾರ ದಂದು ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವರನಟ ಡಾ.ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಡಾ. ರಾಜಕುಮಾರ್ ಅವರು ಕೇವಲ ಒಬ್ಬ ನಟ ಅಲ್ಲ. ಅವರು ಆದರ್ಶ ವ್ಯಕ್ತಿ ಯಾಗಿ ಕಾಣುತ್ತಾರೆ. ಗೋಕಾಕ ಚಳುವಳಿ ಮುಖಾಂತರ ಕನ್ನಡ ನಾಡಿಗೆ ಅವರು ಕೊಟ್ಟಂತಹ ಕೊಡುಗೆ ದೊಡ್ಡದು. ಮೇರು ನಟರಾಗಿದ್ದಾರೆ. ಅವರು, ಸಾಮಾಜಿ-ಕ ಸಮಸ್ಯೆಗಳ ನಿವಾರಣೆಯ ಕಥಾಹಂದರದ ಹಲವಾರು ಚಲನಚಿತ್ರಗಳನ್ನು ನಮಗೆ ನೀಡಿದ್ದಾರೆ. ಕನ್ನಡ ಅಭಿಮಾನವನ್ನು ತೋರಿದ್ದಾರೆ. ಅವರಂತೆ ನಾವೆಲ್ಲರೂ ನಾಡು-ನುಡಿಯ ಬಗ್ಗೆ ಅಭಿಮಾನವನ್ನು ಹೊಂದಬೇಕು.

ಅವರ ಜೀವನದ ಸಾಮಾಜಿ-



ಕ ಕಾಳಜಿಯನ್ನು ಅರಿಯಬೇಕು. ಅಲ್ಲದೆ ಅವರ ಮಗನಾದ ಡಾ.ಪುನೀತ್ ರಾಜ್ ಕುಮಾರ್ ಅವರು ಸಹ ನಟನೆ ಸೇರಿದಂತೆ ಆನೇಕ ಸಾಮಾಜಿ-ಕ ಕಾರ್ಯಗಳನ್ನು ಮಾಡಿದ್ದಾರೆ ಎಂದರು. ವರನಟ ಡಾ.ರಾಜಕುಮಾರ್ ಅವರು ಸಾಮಾಜಿ-ಕ ಸಂದೇಶ ಸಾರುವಂತಹ ಚಿತ್ರಗಳಲ್ಲಿ ನಟಿಸುವ ಮೂಲಕ ದಾದಾ ಸಾಹೇಬ್ ಫಾಲ್ಕೆ ಯಂತಹ ದೇಶದ ಅತ್ಯುನ್ಯತ ಅನೇಕ ಪ್ರಶಸ್ತಿಯನ್ನು ಪಡೆದುಕೊಂಡು ಕನ್ನಡಿಗರ ಮನೆ ಮಾತಾಗಿದ್ದಾರೆ. ಕನ್ನಡ ನಾಡು - ನುಡಿಯ ಅಸ್ಮಿತೆಯಾಗಿರುವ ಡಾ.ರಾಜಕುಮಾರ್ ಅವರು, ತಮ್ಮ ಚಲನಚಿತ್ರಗಳ ಮೂಲಕ ಸಮಾಜ ಸುಧಾರಣೆಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ ಎಂದರು. ಕನ್ನಡ ಚಿತ್ರರಂಗವು ವಿಶ್ವದಲ್ಲೇ ಅತ್ಯಂತ ದೊಡ್ಡ ಮಟ್ಟದಲ್ಲಿ ಬೆಳೆಯಬೇಕು. ಎಂಬುದು ರಾಜಕುಮಾರ್ ಅವರ ಅಶೆಯವಾಗಿತ್ತು.

ನಟನೆಯಲ್ಲಿ ತಮ್ಮನ್ನು ತಾವೇ ಮರೆತು ಹೋಗುತ್ತಿದ್ದರು. ಕರ್ನಾಟಕಕ್ಕೆ ಸಿಕ್ಕ ಮುತ್ತು ಅದಕ್ಕಾಗಿ ಅವರನ್ನು ಮುತ್ತು ರಾಜ್ ಎಂದು ಕರೆಯಲಾಗುತ್ತದೆ. ರಾಯಚೂರು ಕನ್ನಡ ಭಾಷೆಯ ತವರೂರು ಆಗಿದೆ. ರಾಯಚೂರಿನಲ್ಲಿ ಕನ್ನಡವನ್ನು ಬೆಳಸೋಣ, ರಾಯಚೂರಿನಲ್ಲಿ ಕನ್ನಡವನ್ನು ಉಳಿಸಿ, ಬೆಳಸಲು ಎಲ್ಲರೂ ಶ್ರಮಿಸಬೇಕು ಎಂದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ ಅವರು ಮಾತನಾಡಿ, ಡಾ.ರಾಜ್‌ಕುಮಾರ್ ಅವರು ರಂಗಭೂಮಿಯಿಂದ ಬೆಳೆದು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಅವರನ್ನು ಅಭಿಮಾನಿಗಳು ಪ್ರೀತಿಯಿಂದ ಅಣ್ಣಾವ್ರು ಎಂದು ಕರೆದಿದ್ದಾರೆ. ಅವರಂತಹ ನಟನನ್ನು ಮತ್ತೆ ಕಾಣಲು ಸಾಧ್ಯವಿಲ್ಲ. ಡಾ.ರಾಜಣ್ಣ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದರು ಸಹ ಯಾವುದೇ ಪಕ್ಷದ ಜೊತೆಗೆ ಗುರುತಿಸಿಕೊಂಡಿಲ್ಲ. ಬಹುತೇಕ ಕಲಾವಿದರು ಡಾ.ರಾಜ್ ಕುಮಾರ್ ಅವರ ಹೆಸರು ಹೇಳಲೇಬೇಕು.

ಅವರ ಆದರ್ಶಗಳನ್ನು ನಾವು, ನೀವು ಎಲ್ಲರೂ ಪಾಲಿಸಬೇಕು ಎಂದರು. ಉಪನ್ಯಾಸಕರಾಗಿ ಡಾ.ದಂಡಪ್ಪ ಬಿರಾದಾರ್ ಅವರು ಮಾತನಾಡಿ, ರಾಜಕುಮಾರ್ ಅವರು 77 ವರ್ಷಗಳ ಜೀವನ ಅದ್ಭುತ ಪ್ರಯಾಣವಾಗಿತ್ತು. 1954ರಲ್ಲಿ ಬೇಡರ ಕಣ್ಣಪ್ಪ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ ಅವರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಾಯಕ ನಟರಾಗಿ ನಟಿಸಿದ್ದಾರೆ. ಒಂದೇ ಚಿತ್ರದಲ್ಲಿ ಅಭಿನಯ ಹಾಗೂ ಗಾಯನ ಎರಡೂ ಕ್ಷೇತ್ರದಲ್ಲಿ ರಾಷ್ಟ್ರೀಯ ಪ್ರಶಸ್ತಿ ಪಡೆದ ದೇಶದ ಏಕೈಕ ನಟ ಡಾ.ರಾಜಕುಮಾರ್ ಅವರಾಗಿದ್ದಾರೆ.

ಡಾ.ರಾಜಕುಮಾರ್ ಅವರು ನಟಿಸಿದ ಎಷ್ಟೋ ಚಿತ್ರದಿಂದ ಪ್ರೇರೇಪಿತರಾದ ಜನ ಅವರನ್ನು ಅನುಸರಿಸಿ ಸಮಾಜ ಸೇವೆಗೆ ಮುಂದಾಗಿರುವುದು ವಿಶೇಷವಾಗಿದೆ. ಅವರು ನಟನಾಗಿ ಮಾತ್ರವಲ್ಲದೇ ಒಬ್ಬ ಆದರ್ಶ ವ್ಯಕ್ತಿಯಾಗಿ ಕಾಣುತ್ತಾರೆ. ರಾಜ-ಕುಮಾರ್ ಅವರು ಸಿನಿಮಾ ಕ್ಷೇತ್ರದ ಮೂಲಕ ಕನ್ನಡ ನಾಡು ನುಡಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರು ಹೆಚ್ಚಾಗಿ ಭಾಷೆ, ನೆಲ,ಜಲ ಮಹತ್ವದ ಕುರಿತ ಚಿತ್ರಗಳಿಗೆ ಒತ್ತು ನೀಡುತ್ತಿದ್ದರು. ರಾಜಕುಮಾರ್ ಅವರು ಅನೇಕ ಕಲಾವಿದರು, ಸಹ ನಟರಿಗೂ ವೈಯಕ್ತಿಕವಾಗಿ ಸಹಾಯ ಹಸ್ತವನ್ನು ಚಾಚುತ್ತಿದ್ದರು. ರಾಜಕುಮಾರ್ ಅವರು ಸರಳ ಜೀವನಕ್ಕೆ ಆದ್ಯತೆ ನೀಡುತ್ತಿದ್ದರು. ಜನರ ಹೃದಯದಲ್ಲಿ ನೆಲನಿಂತ ಮಾನವೀಯ ಗುಣವುಳ್ಳ ನಾಯಕ ನಟರಾಗಿದ್ದರು ಎಂದರು.

ಅಭಿಮಾನಿಗಳಿಂದ ಡಾ.ರಾಜ್‌ಕುಮಾರ್ ಗೀತೆಗಳ ಸಂಗೀತ ಗಾಯನ: ಡಾ.ರಾಜ್ ಕುಮಾರ್ ಅವರ 97ನೇ ಜಯಂತಿ ಅಂಗವಾಗಿ ಉದಯ ಶಂಕರ್ ಅವರಿಂದ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ನಾವಾಡುವ ನುಡಿಯೇ ಕನ್ನಡ ನುಡಿ, ಕೆ.ಕೆ.ಆರ್.ಸಿ.ಟಿ ನೌಕರ ಗುರು ದೇವರಮನಿ ಅರಕೇರಾ (ಜೂನಿಯರ್ ರಾಜ್‌ಕುಮಾರ್) ಅವರು ಆ ದೇವರ ಹಾಡು ಸೇರಿದಂತೆ ಇತರೆ ಹಾಡುಗಳನ್ನು ಹಾಡಿದರು. ಪ್ರತಾಪ ರೆಡ್ಡಿ, ಮೈತ್ರಿಕರ್, ಮಲ್ಲಿಕಾರ್ಜುನ ಹಾಗೂ ಚಂದ್ರಕಾಂತ ಮಸಾನಿ ಅವರಿಂದ ರಾಜ್‌ಕುಮಾರ್ ಇತರೆ ಗೀತೆಗಳನ್ನು ಹಾಡಲಾಯಿತು.

ಇದೇ ಸಂದರ್ಭದಲ್ಲಿ ರಾಯಚೂರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜಿ.ಸುರೇಶ, ವೆಂಕಟೇಶ್ವರ ಕಾಲೇಜಿನ ಪ್ರಾಂಶುಪಾಲ ನರಸಿಂಹ ಸಾಗರ್, ಕಸಾಪ ಕಾರ್ಯದರ್ಶಿ ರೇವತ್ ರಾವ್, ಅನಿಲ ಕರ್ನಾಟಕ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬಸವರಾಜ, ಮಹಿಳಾ ಘಟಕದ ಅಧ್ಯಕ್ಷ ನಿರ್ಮಲ ಬೆಣ್ಣೆ, ಮಹಿಳಾ ಮುಖಂಡರಾದ ಪಿ.ಸುರೇಖಾ, ಚೆನ್ನರೆಡ್ಡಿ ಬಿರಾದಾರ್, ರಾಜ್‌ಕುಮಾರ್ ಸಂಘದ ಅಧ್ಯಕ್ಷ ತಮ್ಮೇಶ್ ಸೇ-ರಿದಂತೆ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಇದ್ದರು. ಪ್ರತಿಭಾ ಗೋನಾಳ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

# ನೇಮಕಾತಿ ಪ್ರಕಟಣೆ

ಕರ್ನಾಟಕ ಹೈಕೋರ್ಟ್ ನೇಮಕಾತಿ 2026 –101 ಪಿಯೋನ್/ವಾಚ್‌ಮ್ಯಾನ್/ಸ್ವೀಪರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 24, 2026 ಕರ್ನಾಟಕ ಹೈಕೋರ್ಟ್ ನೇಮಕಾತಿ 2026: 101 ಪಿಯೋನ್/ವಾಚ್‌ಮ್ಯಾನ್/ಸ್ವೀಪರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಹೈಕೋರ್ಟ್ ಏಪ್ರಿಲ್ 2026 ರ ಕರ್ನಾಟಕ ಹೈಕೋರ್ಟ್ ಅಧಿಕೃತ ಅಧಿಸೂಚನೆಯ ಮೂಲಕ ಪಿಯೋನ್/ವಾಚ್‌ಮ್ಯಾನ್/ಸ್ವೀಪರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21–ಮೇ–2026 ಅಧಿಕೃತ ವೆಬ್‌ಸೈಟ್: judiciary.karnataka.gov.in

## ಟೌನ್ ಪ್ಲಾನಿಂಗ್ ಅಧಿಕಾರಿ ಶರಣಪ್ಪ ಅಮಾನತು

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಲಂಚಕ್ಕೆ ಬೇಡಿಕೆ ಇಟ್ಟ ಆರೋಪದ ಹಿನ್ನೆಲೆಯಲ್ಲಿ ಲಿಂಗಸಗೂರು ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿ ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಟೌನ್ ಪ್ಲಾನಿಂಗ್ ಅಧಿಕಾರಿ ಶರಣಪ್ಪ ಅವರನ್ನು, ಸರ್ಕಾರ ಅಭಿವೃದ್ಧಿ ಪ್ರಾಧಿಕಾರ ಹಾಗೂ ನಯೋಸೇ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಲತಾ.ಕೆ ಅವರು ಅಮಾನತ್ತು ಮಾಡಿ ಆದೇಶಿಸಿದ್ದಾರೆ.**



ನಗರಾಭಿವೃದ್ಧಿ ಪ್ರಾಧಿಕಾರದ ನಗರ ಯೋಜ–ಕ ಸದಸ್ಯರು/ಸಹಾಯಕ ನಿರ್ದೇಶಕರಾದ ಶರಣಪ್ಪ ಅವರು ಲಿಂಗಸಗೂರು ಯೋಜನಾ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ, ಅವರ ವಿರುದ್ಧ ಇಲಾಖಾ ವಿಚಾರಣೆ ಹಾಗೂ ಕ್ರಿಮಿನಲ್ ಪ್ರಕರಣ ಬಾಕಿ ಇರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತು ಮಾಡಲಾಗಿದೆ. ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯ ಲೀನ್ ಅನ್ನು ಬೆಂಗಳೂರು ನಗರದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯಕ್ಕೆ ವರ್ಗಾಯಿಸಲಾಗಿದೆ.

## ಜನಿವಾರ ತೆಗೆಸಿದ್ದರೆ ಕಠಿಣ ಕ್ರಮ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸಿಇಟಿ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಯ ಜನಿವಾರ ತೆಗೆಯಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂಬ ಆರೋಪದ ಕುರಿತು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಪ್ರತಿಕ್ರಿಯಿಸಿದ್ದು, ಈ ವಿಷಯ ಇನ್ನೂ ಕೆಇಎ ಅಧಿಕಾ–ರಿಗಳ ಗಮನಕ್ಕೆ ಬಂದಿಲ್ಲ. ಇಂತಹದ್ದೇನಾದರೂ ಸಂಭವಿಸಿದರೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.**



ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿಇಟಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಡ್ರೆಸ್ ಕೋಡ್ ನಿಯಮವಿದ್ದು, ಈ ನಿಯಮದ ಬಗ್ಗೆ ಅಧಿಕಾರಿಗಳೇ ನಿರ್ಧಾರ ತೆಗೆದುಕೊಳ್ಳುತ್ತಾರೆ. ಆದರೆ, ಇಂದು ನಡೆದ ಸಿಇಟಿ ಪರೀಕ್ಷೆಯ ಸಮಯದಲ್ಲಿ, ವಿದ್ಯಾರ್ಥಿಗಳ ಜನಿವಾರ ತೆಗೆಯಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂಬ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಇದು ಸಂಭವಿಸಿದಲ್ಲಿ, ಜನವರಿಯಲ್ಲಿ ಮಾಹಿತಿ ನೀಡಿದ ಅಧಿಕಾ–ರಿಗಳು ಮತ್ತು ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಹೇಳಿದ್ದಾರೆ.

# ವಿಶ್ವ ಮಲೇರಿಯಾ ದಿನಾಚರಣೆ ಈ ವರ್ಷದ ಘೋಷಣೆ: ಮಲೇರಿಯಾ ಅಂತ್ಯಗೊಳಿಸಲು ಚಾಲನೆ: ಈಗ ನಮಗೆ ಸಾಧ್ಯವಿದೆ. ಈಗ ನಾವು ಮಾಡಲೇಬೇಕು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಲೇರಿಯಾ ದಿನಾಚರಣೆ ಕು–ರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ತುರಕಟ್ಟಿ ಕ್ಯಾಂಪ್ ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ವಿಶ್ವ ಮಲೇರಿಯಾ ದಿನಾಚರಣೆ ಆಚರಣೆ ಮಾಡಲಾಗುತ್ತದೆ ಇನ್ನು ಮುಂದೆ ಮಾನ್ಸೂನ್ ಮಳೆಗಳು ಪ್ರಾರಂಭವಾಗುತ್ತಿರುವುದರಿಂದ ಅಲ್ಲಲ್ಲಿ ತಗ್ಗು ದಿನ್ನಿಗಳಲ್ಲಿ ಮಳೆ ನೀರು ಸಂಗ್ರಹಣೆ ಹೆಚ್ಚಾಗಿ ಸೊಳ್ಳೆಗಳಿಂದ ಖಾಯಿಲೆ ಹರಡುವ ಸಾಧ್ಯತೆ



ಇದೆ ಅದಕ್ಕಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಿದೆ ಯಾವುದೇ ಜ್ವರ ಬರಲಿ ಕೊಡಲೇ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಸೊಳ್ಳೆಗಳು ಕಚ್ಚದಂತೆ ಸೊಳ್ಳೆ ನಿಯಂತ್ರಣಗಳನ್ನು ಉಪಯೋಗಿಸಿ ಬೇಸಿಗೆಯಲ್ಲಿ ಮಧ್ಯಾಹ್ನದ ಸಮಯದಲ್ಲಿ ಬಿಸಿಲಿನಲ್ಲಿ ಆಟವಾಡದಿರಲು ಆರೋಗ್ಯ ಸಲಹೆಗಳನ್ನು ಪಾಲಿಸಿ ಮತ್ತು ಆರೋಗ್ಯ ಕಡಗೆ ಹೆಚ್ಚು ಜಾಗೃತಿ ವಹಿಸಬೇಕು. ಉತ್ತಮ ಮತ್ತು ನೀರಿನಾಂಶ ಹೆಚ್ಚು ಇರುವ ಆಹಾರ ಮತ್ತು ಹಣ್ಣು ಕಲ್ಲಂಗಡಿ ಸೌತೆಕಾಯಿ ಹೀರೆಕಾಯಿ ಇನ್ನೂ ಮುಂತಾದ ಪೌಷ್ಟಿಕ ಆಹಾರ ಸೇವನೆ ಕಡೆಗೆ ಗಮನ ಹರಿಸಿ ಹೆಚ್ಚು ಹೆಚ್ಚು ನೀರನ್ನು ಕುಡಿಯಿರಿ ದೇಹವನ್ನು ನಿರ್ಜಲೀಕರಣವಾಗದಂತೆ ನೋಡಿಕೊಳ್ಳಿ ಎಂದರು.

ನಂತರ ವಿದ್ಯಾರ್ಥಿಗಳು ಕುರಿತು ಮಾತನಾಡಿದ ಮಹೇಶ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು ಮಲೇರಿಯಾ ಜ್ವರ ಹೆಣ್ಣು ಅನಾಫಿಲೀಸ್ ಸೊಳ್ಳೆಗಳು ಕಚ್ಚುವಿಕೆಯಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ ಮಲೇರಿಯಾ ಜ್ವರದ ಪ್ರಾರಂಭದ ಲಕ್ಷಣಗಳಾದ ಚಳಿ ಜ್ವರ ದಿನ ಬಿಟ್ಟು ದಿನ ಜ್ವರ ಬರುವುದು ತಲೆನೋವು ನಡುಕು ವಾಂತಿ ಕಾಣಿಸಿಕೊಳ್ಳುತ್ತವೆ ಇಂತಹ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ಹತ್ತಿರದ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಹಾಗೂ ಮನೆ ಸುತ್ತಮುತ್ತ ಪರಿಸರದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಿ ಮತ್ತು ಬೇಸಿಗೆಯಲ್ಲಿ ಮಕ್ಕಳ ಹೊರಾಂಗಣ ಆಟ ಆಡಬೇಡಿ ಹೆಚ್ಚು ಹೆಚ್ಚು ನೀರು ಕುಡಿಯಿರಿ ಮಧ್ಯಾಹ್ನದ ಹೊತ್ತಿನಲ್ಲಿ ಬಿಸಿಲಿನಲ್ಲಿ ಆಟ ಆಡುವುದು ಆರೋಗ್ಯಕ್ಕೆ ಹಾನಿಯುಂಟು ಮಾಡುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರ ಉತ್ತಮ ಸಾಧನೆ



ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಹತ್ತನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು ಒಟ್ಟು 192 ವಿದ್ಯಾರ್ಥಿನಿಯರಲ್ಲಿ 182 ವಿದ್ಯಾರ್ಥಿನಿಯರು ಪಾಸಾಗುವ ಮೂಲಕ ಶಾಲೆಗೆ ಶೇ94ರಷ್ಟು ಫಲಿತಾಂಶ ಬಂದಿದೆ,**

ಶಾಹಿನ್ ತಂದೆ ಅಕ್ಬರ್ ಅಹ್ಮದ್ 265ಕ್ಕೆ 616ಅಂಕ ಪಡೆಯುವ ಮೂಲಕ ಶೇ98.50 ಫಲಿತಾಂಶ ಪಡೆದು ರಾಜ್ಯಕ್ಕೆ ಹತ್ತನೇ ಸ್ಥಾನ ಮತ್ತು ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ, ಅನುಜಾ ಮಲ್ಲಪ್ಪ 625ಕ್ಕೆ 602 ಅಂಕ ಪಡೆದು ದ್ವಿತಿಯ ಸ್ಥಾನ ಮತ್ತು ಮೌಲಮ್ಮ ಮೌಲಪ್ಪ 625ಕ್ಕೆ 582ಅಂಕ ಪಡೆದು ತೃತಿಯ ಸ್ಥಾನ ಗಳಿಸಿದ್ದಾರೆ ಒಟ್ಟು 182ವಿದ್ಯಾರ್ಥಿಗಳು ಪಾಸಾಗಿದ್ದು ಇದರಲ್ಲಿ ಡಿಸ್ಟಿಂಕ್ಷನ್ 18, ಪ್ರಥಮ ಸ್ಥಾನ93, ದ್ವಿತಿಯ ಸ್ಥಾನ 46 ಹಾಗೂ ಮೂರನೇಸ್ಥಾನವನ್ನು 25 ವಿದ್ಯಾರ್ಥಿನಿಯರು ಗಳಿಸಿದ್ದಾರೆ.

ಸಾಧನೆಗೈದ ವಿದ್ಯಾರ್ಥಿನಿಯರನ್ನು ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಮುಖ್ಯಗುರುಗಳು, ಶಿಕ್ಷಕರು ಮತ್ತು ಪಾಲಕ–ಪೋಷಕರು ಅಭಿನಂಧಿಸಿದ್ದಾರೆ.

ಬಾಲಕರ ಸರ್ಕಾರಿ ಪ್ರೌಢಶಾಲೆಗೆ ಶೇ93ರಷ್ಟು ಫಲಿತಾಂಶ ಪಟ್ಟಣದ ಕರ್ನಾಟಕ ಪಬ್ಲಿಕ್‌ಶಾಲೆಯ ಪ್ರೌಢಶಾಲಾ ವಿಭಾಗದ ವಿರೇಶ ಶಂಕ್ರಪ್ಪ 625ಕ್ಕೆ 595 ಅಂಕಪಡೆದು ಶೇ95.02, ಮೌನೇಶ ಧರ್ಮಪಪ 625ಕ್ಕೆ 594 ಅಂಕ ಪಡೆದು ಶೇ95.04 ಹಾಗೂ ನಾಗರಾಜ ಹನುಮಪ್ಪ 625ಕ್ಕೆ 574 ಅಂಕ ಪಡದು ಶೇ91.84 ಫಲಿತಾಂಶ ಪಡೆಯುವ ಮೂಲಕ ಒಟ್ಟು 137 ವಿದಾರ್ಥಿಗಳಲ್ಲಿ 128 ವಿದ್ಯಾರ್ಥಿಗಳು ಪಾಸಾಗಿದ್ದು ಒಟ್ಟು ಶಾಲಾ ಫಲಿತಾಮಶ 93.43%ಬಂದಿದೆ, ಸಾಧನೆಗೈದ ವಿದ್ಯಾಥಿಗಳನ್ನು ಎಸ್‌ಡಿ–ಎಂಸಿ ಮಂಡಳಿ ಸದಸ್ಯರು ಮತ್ತು ಶಿಕ್ಷಕರು ಅಭಿನಂದಿಸಿದ್ದಾರೆ.

# ಎಸ್ ಎಸ್ ಎಲ್ ಸಿ ಶ್ರೀ ಅಮರೇಶ್ವರ ಪ್ರೌಢ ಶಾಲೆ 99.48% ಸಾಧನೆ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ಈಚನಾಳ ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ) ವತಿಯ ಶ್ರೀ ಅಮರೇಶ್ವರ ಅನುದಾನಿತ ಪ್ರೌಢ ಶಾಲೆ 2025–26ನೇ ಸಾಲಿನ ಎಸ್‌ಎಸ್–ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ.**

ಈ ಶಾಲೆಯಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು 196 ವಿದ್ಯಾರ್ಥಿಗಳಲ್ಲಿ 195 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆಯು ಶೇ 99.48% ಫಲಿತಾಂಶ ದಾಖಲಿಸಿದೆ. ಉನ್ನತ ಶ್ರೇಣಿ 08 ವಿದ್ಯಾರ್ಥಿಗಳು



ಶಾಂತಮ್ಮ ಹುಲುಗಣ್ಣ ರಿಹಾನ್ ಬೇಗಮ್

ಪ್ರಥಮ ಶ್ರೇಣಿ 124 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ 50 ವಿದ್ಯಾರ್ಥಿಗಳು ಪಾಸ ಕ್ಲಾಸ್ 13 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಶಾಲೆಯ ಟಾಪರ್‌ಗಳಾಗಿ ಶಾಂತಮ್ಮ (590 ಅಂಕ 94.40%), ಹುಲಗಣ್ಣ (586 ಅಂಕ 93.76%) ಹಾಗೂ ರಿಹಾನ್ ಬೇಗಂ (566 ಅಂಕ 90.56%) ಅಂಕ ಪಡೆದು ಈ ಮೂರು ವಿದ್ಯಾರ್ಥಿಗಳು ತಮ್ಮ ಪೋಷಕರಿಗೂ ಹಾಗೂ ಶಾಲೆಗೂ ಕೀರ್ತಿತಂದಿದ್ದರೆಂದು ವಿದ್ಯಾರ್ಥಿಗಳ ಈ ಶ್ರೇಷ್ಠ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಶರಣಪ್ಪ ಮೇಟಿ, ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು ಹಾಗೂ ಎಲ್ಲಾ ಶಿಕ್ಷಕ ವೃಂದ ವಿದ್ಯಾರ್ಥಿಗಳಿಗೆ ಅಭಿನಂದನೆ ತಿಳಿಸಿದ್ದಾರೆ .ಈ ಫಲಿತಾಂಶವು ಶಾಲೆಯ ಗುಣಮಟ್ಟದ ಶಿಕ್ಷಣ ಮತ್ತು ಶಿಕ್ಷಕರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

# ಎಸ್.ಕೆ.ಬಾಲಕಿಯರ ಪ್ರೌಢಶಾಲೆ ಫಲಿತಾಂಶ ಶೇ.95



ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ಬಾಲಕಿಯರ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶ 95.16% ಬಂದಿದೆ. ಪರೀಕ್ಷೆಗೆ ಒಟ್ಟು 62 ವಿದ್ಯಾರ್ಥಿನಿಯರು ಹಾಜರಾಗಿದ್ದವರಲ್ಲಿ 59 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ.**

625 ಕ್ಕೆ 579 ಅಂಕ ಪಡೆದ ಕು.ಸ್ನೆಹಾ ಪರಸಪ್ಪ ಪ್ರಥಮ ಸ್ಥಾನ, 625 ಕ್ಕೆ 552 ಅಂಕ ಪಡೆದು ಕು.ಯಲ್ಲಮ್ಮ ಬಿರಾದಾರ ದ್ವಿತೀಯ ಸ್ಥಾನ ಮತ್ತು 625 ಕ್ಕೆ 543 ಅಂಕ ಪಡೆದ ಕು. ಅತಿಫಾ ರಂಜನಗಿ ತೃತೀಯ ಸ್ಥಾನ ಪಡೆದಿದ್ದಾರೆ. ತೃತೀಯ ಭಾಷೆ ಹಿಂದಿ ವಿಷಯದಲ್ಲಿ ಕು.ಪೂಜಾ ಕಟ್ಟಿಮನಿ , ಕು.ಸಂಜನಾ ಬಡಿಗೇರ ಮತ್ತು ಕು.ಯಲ್ಲಮ್ಮ ಬಿರಾದಾರ 100/100 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಕರ್ನಾಟಕ ಸರಕಾರದ 29 ಅಂಶ ಕಾರ್ಯಕ್ರಮ ಮತ್ತು ನಾಲ್ಕು ಮಾದರಿ ಪ್ರಶ್ನೆ ಪತ್ರಿಕೆಗಳ ಮುಖಾಂತರ ಮಕ್ಕಳಲ್ಲಿನ ಪರೀಕ್ಷೆ ಸಂಬಂಧಿಸಿದ ಭಯ ದೂರ ಮಾಡಿತು ಅಲ್ಲದೆ ರಾಜ್ಯ ಮಟ್ಟದ ಮೂರು ಸರಣಿ ಪರೀಕ್ಷೆಗಳನ್ನು ನಡೆಸಿ ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಿತು. ಪ್ರತಿ ಪಾಠದ ಕೆಲಿ ಪ್ರಶ್ನೊತ್ತರ ಹೊತ್ತಿಗೆ ಬಹು ಮುಖ್ಯವಾದ ಪಾತ್ರವಹಿಸಿದೆ. ವಿದ್ಯಾರ್ಥಿನಿಯರ ಈ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಂಸ್ಥೆಯ ಚೇರ್ಮನರಾದ ವ್ಹಿ.ಸಿ.ಹಿರೇಮಠ, ವೈಸ ಚೇರಮನರಾದ ಕೆ. ಎಸ್.ಮುರಾಳ, ಕಾರ್ಯದರ್ಶಿಯಾದ ಎಮ್. ಎಸ್.ಸರಶೆಟ್ಟಿ ಪ್ರೌಢಶಾಲೆಯ ಚೇರಮನ್ ಆರ್.ಬಿ.ಳಭಾವಿ, ಮುಖ್ಯೋಪಾಧ್ಯಾಯ ಡಾ.ಅನಿಲಕುಮಾರ ಇರಾಜ ಹಾಗೂ ಶಿಕ್ಷಕರು ಶಿಕ್ಷಕೇತರ ಬಳಗ ಅಭಿನಂದನೆ ಸಲ್ಲಿಸಿದ್ದಾರೆ.


# ಜಾಲಹಳ್ಳಿ ಮೊರಾರ್ಜಿ ವಸತಿ ಶಾಲೆ ವಿದ್ಯಾರ್ಥಿಗೆ ರಾಜ್ಯ ಮಟ್ಟದಲ್ಲಿ 4ನೇ ಸ್ಥಾನ

**ಜಾಲಹಳ್ಳಿ: ದಿನಾಂಕ ಎ 23 ರಂದು ಪ್ರಕಟವಾದ ಖಖಐಅ ಫಲಿತಾಂಶದಲ್ಲಿ, ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆ ಅತ್ಯುತ್ತಮ ಸಾಧನೆ ಮಾಡಿದೆ.**

ಈ ಶಾಲೆಯ ವಿದ್ಯಾರ್ಥಿ ಮಲ್ಲಿಕಾರ್ಜುನಯ್ಯ ಸ್ವಾಮಿ ಅವರು 622/625 (99.52%) ಅಂಕಗಳನ್ನು ಗಳಿಸಿ ರಾಜ್ಯ ಮಟ್ಟದಲ್ಲಿ 4ನೇ ರ್ಯಾಂಕ್(ಖಿಚಿಟಿಞ) ಹಾಗೂ ಜಿಲ್ಲೆಯಲ್ಲಿ ದ್ವಿತೀಯ ಸ್ಥಾನ ಪಡೆದು ಗಮನ ಸೆಳೆದಿದ್ದಾರೆ.

ಮೇಲು ಸ್ಥಾನ ಪಡೆದ ವಿದ್ಯಾರ್ಥಿಗಳು:

1. ಮಲ್ಲಿಕಾರ್ಜುನಯ್ಯ ಸ್ವಾಮಿ
ತಂದೆ: ಸಿದ್ದಯ್ಯ ಸ್ವಾಮಿ
ಅಂಕಗಳು: 622/625 (99.52%) ರಾಜ್ಯಕ್ಕೆ 4ನೇ ರ್ಯಾಂಕ್(ಖಿಚಿಟಿಞ) , ಜಿಲ್ಲೆಗೆ 2ನೇ ಸ್ಥಾನ
2. ನಂದೀಶ್ ಶರಣಪ್ಪ ಜಟ್ಟ
ತಂದೆ: ಶರಣಪ್ಪ ಬಸಪ್ಪ ಜಟ್ಟ





ಅಂಕಗಳು: 611/625 (97.76%) ದ್ವಿತೀಯ ಸ್ಥಾನ
3. ನಾಗವೇಣಿ
ಅಂಕಗಳು: 610/625 (97.60%) ತೃತೀಯ ಸ್ಥಾನ
4. ಶ್ರೀದೇವಿ
ತಂದೆ: ಸಿದ್ದಪ್ಪ
ಅಂಕಗಳು: 610/625 (97.60%) ನಾಲ್ಕನೇ ಸ್ಥಾನ
5. ಸುಜಯ್ ತಂದೆ: ರಮೇಶ್





ಅಂಕಗಳು: 603/625 (96.48%) 5ನೇ ಸ್ಥಾನ
6. ಶ್ರೇಯ
ತಂದೆ: ರುದ್ರಪ್ಪ
ಅಂಕಗಳು: 96.32% 6ನೇ ಸ್ಥಾನ

**ಗ್ರೇಡ್ ಪ್ರಕಾರ ಫಲಿತಾಂಶ:**

- ಡಿಸ್ಟಿಂಕ್ಷನ್ 16 ವಿದ್ಯಾರ್ಥಿಗಳು
- ಪ್ರಥಮ ಶ್ರೇಣಿ 16 ವಿದ್ಯಾರ್ಥಿಗಳು
- ದ್ವಿತೀಯ ಶ್ರೇಣಿ 8 ವಿದ್ಯಾರ್ಥಿಗಳು
- ತೃತೀಯ ಶ್ರೇಣಿ 9 ವಿದ್ಯಾರ್ಥಿಗಳು

ಒಟ್ಟು ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ:–49
ಒಟ್ಟು ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ:–49

**ಶಾಲೆಯ ಸಾಧನೆ:**

- ಒಟ್ಟು ಫಲಿತಾಂಶ 100%
- ಗುಣಾತ್ಮಕ ತೂಕ 92%
- ಶಾಲೆ ಗ್ರೇಡ್ ಂ

ಈ ಸಾಧನೆ ಕುರಿತು ಶಾಲೆಯ ಮುಖ್ಯಗುರು ಶ್ರೀ ಸೋಮಶೇಖರ್ ಗೌಡ ಅವರು ಸಂತೋಷ ವ್ಯಕ್ತಪಡಿಸಿ, ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಶಿಕ್ಷಕರ ಮಾರ್ಗದರ್ಶನವೇ ಈ ಯಶಸ್ಸಿಗೆ ಕಾರಣ ಎಂದು ತಿಳಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿಟೆಕ್ ಆಟೋಮೊಬೈಲ್ ಎಂಜಿನಿಯರಿಂಗ್

ಬಿಟೆಕ್ ಆಟೋಮೊಬೈಲ್ ಎಂಜಿನಿಯರಿಂಗ್ ಎನ್ನುವುದು ವಾಹನ ಮತ್ತು ಆಟೋಮೊಬೈಲ್ ವಲಯದಲ್ಲಿ ಒಳಗೊಂಡಿರುವ ಭಾಗಗಳ ವಿನ್ಯಾಸ ಮತ್ತು ನಿರ್ವಹಣೆಯನ್ನು ವಿಶೇಷ ವಿಷಯಗಳ ಮೂಲಕ ನಿರ್ವಹಿಸುವ ಒಂದು ಕಾರ್ಯಕ್ರಮವಾಗಿದೆ. ಕೋರ್ಸ್ ಅರ್ಹತಾ ಮಾನದಂಡವೆಂದರೆ 12 ನೇ ತರಗತಿಯನ್ನು 50 – 60 ಪ್ರತಿಶತ ಅಂಕಗಳೊಂದಿಗೆ ಪೂರ್ಣಗೊಳಿಸುವುದು. ಪ್ರವೇಶ ಪ್ರಕ್ರಿಯೆಯು ಪ್ರವೇಶ ಪರೀಕ್ಷೆಗಳು ಮತ್ತು 12 ನೇ ತರಗತಿಯ ಬೋರ್ಡ್ ಪರೀಕ್ಷೆಯ ಅಂಕಗಳನ್ನು ಒಳಗೊಂಡಿರುತ್ತದೆ. ಬಿ.ಟೆಕ್ ಆಟೋಮೊಬೈಲ್ ಕೋರ್ಸ್ ವಿದ್ಯಾರ್ಥಿಗಳಿಗೆ ವಾಹನಗಳನ್ನು ವಿನ್ಯಾಸಗೊಳಿಸಲು, ಅಭಿವೃದ್ಧಿಪಡಿಸಲು, ತಯಾರಿಸಲು ಮತ್ತು ನಿರ್ವಹಿಸಲು ಮತ್ತು ಎಂಜಿನ್ ವ್ಯವಸ್ಥೆಗಳು, ವಾಹನ ಡೈನಾಮಿಕ್ಸ್, ಆಟೋಮೋಟಿವ್ ಎಲೆಕ್ಟ್ರಾನಿಕ್ಸ್, ಅಂಆ/ಅಂಒ ಮತ್ತು ಇಗಿ ಗಳಂತಹ ಉದಯೋನ್ಮುಖ ತಂತ್ರಜ್ಞಾನದ ಮೇಲೆ ಕೇಂದ್ರೀಕರಿಸಲು ಕಲಿಸುತ್ತದೆ. ಬಿ.ಟೆಕ್ ಆಟೋಮೊಬೈಲ್ ಪಠ್ಯಕ್ರಮವು ವಾಹನ ಡೈನಾಮಿಕ್ಸ್, ಎಂಜಿನ್ ವಿನ್ಯಾಸ, ಥರ್ಮೋಡೈನಾಮಿಕ್ಸ್ ಮತ್ತು ಉತ್ಪಾದನೆಯಂತಹ ವಿಷಯಗಳನ್ನು ಒಳಗೊಂಡಿದೆ, ಇದು ಎಲೆಕ್ಟ್ರಿಕ್ ಮತ್ತು ಹೈಬ್ರಿಡ್ ವಾಹನಗಳು, ಆಟೋಮೋಟಿವ್ ಎಲೆಕ್ಟ್ರಾನಿಕ್ಸ್, ಮೆಕಾಟ್ರಾನಿಕ್ಸ್, ಹಾಗೆಯೇ ವಿಕಸಿಸುತ್ತಿರುವ ಆಟೋಮೋಟಿವ್ ಉದ್ಯಮಕ್ಕಾಗಿ ವಾಹನಗಳನ್ನು ವಿನ್ಯಾಸಗೊಳಿಸಲು, ನಿರ್ಮಿಸಲು ಮತ್ತು ನಿರ್ವಹಿಸಲು ಂಖ ಯ ಆಧುನಿಕ ಗಮನಗಳೊಂದಿಗೆ ಬೆಸೆದುಕೊಂಡಿದೆ. ಕೆಲವು ಜನಪ್ರಿಯ ಬಿ ಟೆಕ್ ಆಟೋಮೊಬೈಲ್ ಎಂಜಿನಿಯರಿಂಗ್ ಕಾಲೇಜುಗಳು ಆಖಿಗ, ಖಖಒ ಸಂಸ್ಥೆ, CU, LPU ಮತ್ತು ಅಮಿಟಿ ವಿಶ್ವವಿದ್ಯಾಲಯ (ನೋಯ್ಡಾ). ಇಲ್ಲಿ ಸರಾಸರಿ ಕೋರ್ಸ್ ಶುಲ್ಕವು ಸಾಮಾನ್ಯವಾಗಿ ರೂ. 2 ಲಕ್ಷದಿಂದ ರೂ. 10 ಲಕ್ಷದವರೆಗೆ ಇರುತ್ತದೆ. ಕೋರ್ಸ್ ಮುಗಿದ ನಂತರ, ಬಿ.ಟೆಕ್ ಇನ್ ಆಟೋಮೊಬೈಲ್ ಎಂಜಿನಿಯರಿಂಗ್ ಪದವೀಧರರು ವಿನ್ಯಾಸ, ಸಂಶೋಧನೆ ಮತ್ತು ಅಭಿವೃದ್ಧಿ, ಉತ್ಪಾದನೆ ಮತ್ತು ಸೇವಾ ಉದ್ಯಮಗಳಲ್ಲಿ ಮೆಕ್ಯಾನಿಕಲ್ ಡಿಸೈನ್ ಎಂಜಿನಿಯರ್, ಗುಣಮಟ್ಟ ಎಂಜಿನಿಯರ್, ಉತ್ಪಾದನಾ ಎಂಜಿನಿಯರ್ ಮುಂತಾದ ಪಾತ್ರಗಳಲ್ಲಿ ವೈವಿಧ್ಯಮಯ ವೃತ್ತಿಜೀವನವನ್ನು ಹೊಂದಿದ್ದಾರೆ. ಅವರು ವಿದ್ಯುತ್ ಚಾಲಿತ ವಾಹನಗಳು, ಆಟೋ ದೈತ್ಯರು (ಟಾಟಾ, ಮಾರುತಿ ಸುಜುಕಿ), ಪಿಎಸ್‌ಯುಗಳು ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳಂತಹ ಉದಯೋನ್ಮುಖ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಪಡೆಯುತ್ತಾರೆ, ಕ್ರಿಯಾತ್ಮಕ ಉದ್ಯಮದಲ್ಲಿ ವಾಹನ ಸೃಷ್ಟಿ, ನಿರ್ವಹಣೆ ಮತ್ತು ಹೊಸ ತಂತ್ರಜ್ಞಾನ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತಾರೆ ಮತ್ತು ಸುಮಾರು 4 ರಿಂದ 6 ಸಾವಿರ ರೂಪಾಯಿಗಳ ಸಂಬಳವನ್ನು ಪಡೆಯಬಹುದು. ಬಿ ಟೆಕ್ ಇನ್ ಆಟೋಮೊಬೈಲ್ ಬಗ್ಗೆ ವಿವರವಾಗಿ ತಿಳಿದುಕೊಳ್ಳಲು ಬಯಸುವ ವಿದ್ಯಾರ್ಥಿಗಳು ಕೆಳಗಿನ ಲೇಖನವನ್ನು ಓದಬಹುದು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಜಾಲಹಳ್ಳಿಯಲ್ಲಿ ಅದ್ದೂರಿಯಾಗಿ ಮಹರ್ಷಿ ಭಗೀರಥ ಜಯಂತಿ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಭಗೀರಥ ಸೇವಾ ಸಮಿತಿ ವತಿಯಿಂದ ಮಹರ್ಷಿ ಭಗೀರಥ ಜಯಂತಿಯನ್ನು ಅತ್ಯಂತ ಭಕ್ತಿಭಾವದಿಂದ ಹಾಗೂ ವೈಭವದಿಂದ ಆಚರಿಸಲಾಯಿತು. ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದಿಂದ ಭಗೀರಥ ವೃತ್ತದವರೆಗೆ ಭವ್ಯ ಮೆರವಣಿಗೆ ನಡೆಸಲಾಗಿದ್ದು, ಗ್ರಾಮದಲ್ಲಿ ಹಬ್ಬದ ಸಂಭ್ರಮ ಮೇಳೈಸಿತ್ತು.**

ಕಾರ್ಯಕ್ರಮಕ್ಕೆ ಬೆಳಿಗ್ಗೆ ಜಾಲಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ವಿಜಯಲಕ್ಷ್ಮಿ ವೆಂಕೋಬ ತೋಟದ ಅವರು ಚಾಲನೆ ನೀಡಿದರು. ಬಳಿಕ ಮಹರ್ಷಿ ಭಗೀರಥರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭ ನೀಡಲಾಯಿತು. ನಂತರ ಗ್ರಾಮಸ್ಥರು, ಗಣ್ಯರು ಮತ್ತು ವಿವಿಧ ಸಂಘಟನೆಗಳ ಮುಖಂಡರು ಭಗೀರಥರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ರಂಗಣ್ಣ ಕೊಲ್ಕರ್ ಮಾತನಾಡಿ, ಮಹರ್ಷಿ ಭಗೀರಥರ ತಪಸ್ಸು, ಸಾಧನೆ ಹಾಗೂ ಅವರ ಜೀವನ ಮೌಲ್ಯಗಳನ್ನು ವಿವರಿಸಿದರು. ಸಮಾಜದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸೌಲಭ್ಯ ಕಲ್ಪಿಸಲು ಎಲ್ಲರೂ ಕೈಜೋಡಿಸಬೇಕೆಂದು ಕರೆ ನೀಡಿದರು.



ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರೆಹಮಾನ್ ಮಾತನಾಡಿ, "ತಮ್ಮ ಅಚಲ ಸಂಕಲ್ಪ ಮತ್ತು ಘೋರ ತಪಸ್ಸಿನಿಂದ ದೇವಗಂಗೆಯನ್ನು ಭೂಮಿಗೆ ತಂದ ಮಹರ್ಷಿ ಭಗೀರಥರು ಮಹಾನ್ ತಪಸ್ವಿಗಳು. ವೈಶಾಖ ಮಾಸದ ಸಪ್ತಮಿಯನ್ನು 'ಗಂಗಾ ಸಪ್ತಮಿ' ಎಂದು ಆಚರಿಸಲಾಗುತ್ತದೆ. ಇದೇ ದಿನ ಭಗೀರಥ ಜಯಂತಿ ಆಚರಣೆ ನಮ್ಮ ಸಂಸ್ಕೃತಿಯ ವೈಶಿಷ್ಟ್ಯ." ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಪಿಎಸ್‌ಐ ವೈಶಾಲಿ ಜಳಕಿ ಸೇರಿದಂತೆ ಗ್ರಾಮದ ಹಿರಿಯರು, ಸಮಾಜದ ಮುಖಂಡರು,ಇದೆ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ವೀರಣ್ಣ ಬಳೆ, ಜಗದೀಶ್ ಪಂಪಾಪತಿ ಬಸವರಾಜ ಪಾಣಿ ಶಂಕರಗೌಡ ಮಾಲಿ ಪಾಟೀಲ್ ಶ್ರೀಧರ್ ದೇಸಾಯಿ ರಾಜಾರಾಮ್ ಭದ್ರಪ್ಪ ನಾಯಕ್ ಯಾಸೀನ್ ಮುಲ್ಲಾ, ವಿನೋದ್ ಚಿಕ್ಕಲ್, ಬಾಬಾ ಮೆಡಿಕಲ್ RSSN ಅಧ್ಯಕ್ಷರಾದ ಗೋವಿಂದ ಅಲಗೇರಿ RSSN ಉಪಾಧ್ಯಕ್ಷರಾದಖುರ್ಷಿದ್ ಪಟೇಲ್, ತಿಮ್ಮಣ್ಣ ದಿದಗಿ, ಸಿದ್ದಪ್ಪ ಗುಮೆದಾರ್, ಮೌನೇಶ್ ನಾಯಕ್, ರಮೇಶ ಅನ್ವರಿ ಚಂದಪ್ಪ ಬುದ್ದಿನ್ನಿ, ರಮೇಶ್ ಬಾಗುರ್, ರಂಗಪ್ಪ ತೊಗರಿ ಹುಸೇನ್ ನಾಸಿ, ಶಿವನಗೌಡ ವಂದಲಿ, ತಮ್ಮಣ್ಣ ಹೇರುಂಡಿ ಕರವೇ, ನಂದಪ್ಪ ಪಿ ಮಡ್ಡಿ ಕರವೇ, ಹೆದರ ಮುಲ್ಲಾ ಇಮಾಮ್ ಸಾಬ್, ಶರಣು ಹುಣಸಿಗಿ,ಭೀಮಣ್ಣ ಅಂಜಳ ಗಂಗಪ್ಪ ತಗ್ಗಳ್ಳಿ, ಮಲ್ಲಿಕಾರ್ಜುನ ಹಡಪದ್, ನಿಂಗಪ್ಪಹಂಪರಗುಂದಿ ಸುರೇಶ್ ಪೂಜಾರಿ,ರಂಗಪ್ಪ ಬಂಡಿ,ಮುದುರಂಗಪ್ಪ ವಠಾರ, ಬುಡ್ಡಪ್ಪ ಗಿರಿಯಪ್ಪ ಪತ್ರಕರ್ತರು ಚನ್ನು ಪತರಕರ್ತರು ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ವೀರಶ ಅರಕೇರಿ ಸದಸ್ಯರಾದ ಸಲಬಣ್ಣ ಹಂಪರಗುಂದಿ, ರಮೇಶ್ ತೆಗ್ಗಳ್ಳಿ ಅಯ್ಯಪ್ಪ ತಾತ, ತಿಮ್ಮಣ್ಣ ನಾಯಕ್ ದಿವಾನ್, ರಾಜರಿದ್ದರು ಕೃಷಿ ಪತ್ತಿನ ಸಹಕಾರ ಸಂಘದ ಎಲ್ಲಾ ನೂತನ ಸದಸ್ಯರಾಧ ವೆಂಕೋಬ ಪೂಜಾರಿ ವೆಂಕಣ್ಣ ಯರಕಮಟ್ಟಿ, ಈಶಣ್ಣ ಕಾಟಮಳ್ಳಿ ಹಾಜರಿದ್ದರು ಸಮಾಜದ ಮುಖಂಡರು ಹ ಹಾಜರಿದ್ದರು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಅನೇಕರು ಭಾಗವಹಿಸಿದ್ದರು.

# ಕ್ಯುಲೇಕ್ಸ್ ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಆನೆಕಾಲು ರೋಗವನ್ನು ನಿಯಂತ್ರಿಸಲು ರಾತ್ರಿ ವೇಳೆಯ ರಕ್ತಲೇಪನ ಮಾಡಿಸಿ



**ನೈಜ್ಯ ದೆಸೆ ನ್ಯೂಸ್**

**ಸೋಂಕಿತ ಕ್ಯುಲೇಕ್ಸ್ ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಹಾಗೂ ಒಮ್ಮೆ ಬಂದರೆ ಜೀವನ ಪರ್ಯಂತ ಕಾಡುವ ಆನೆಕಾಲು ರೋಗವನ್ನು ಆರಂಭದಲ್ಲಿಯೇ ತಡೆಗಟ್ಟಲು ರಾತ್ರಿ ವೇಳೆ ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ರಕ್ತಲೇಪನ ಕಾರ್ಯಕ್ಕೆ ಜನತೆ ಸಹಕರಿಸಿ ಎಂದು ಎಲ್‌ಬಿಎಸ್ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸುನೀತಾ ತಿಳಿಸಿದರು.**

ರಾಯಚೂರು ನಗರದ ಎಲ?ಬಿಎಸ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮಡ್ಡಿಪೇಟ್ ಪ್ರದೇಶದಲ್ಲಿ ರಾತ್ರಿ ವೇಳೆ ಹಮ್ಮಿಕೊಂಡ ರಕ್ತಲೇಪನ ಕಾರ್ಯದ ಕುರಿತು ಮಾತನಾಡಿ ಸಮುದಾಯದಲ್ಲಿ ನಮ್ಮೊಂದಿಗೆ ಹಲವು ವಿಧದ ಸೊಳ್ಳೆಗಳು ಇದ್ದು ಅದರಲ್ಲಿ ಕ್ಯೂಲೆಕ್ಸ್ ಸೊಳ್ಳೆ, ಆನೆಕಾಲು ರೋಗ ಹೊಂದಿದ ವ್ಯಕ್ತಿಗೆ ಕಚ್ಚಿ ಅದೆ ಸೊಳ್ಳೆ ಇನ್ನೊಬ್ಬರಿಗೆ ಕಚ್ಚಿದಾಗ ಬರಿಗಣ್ಣಿಗೆ ಕಾಣದ 'ವುಚೆರೇರಿಯಾ ಬ್ಯಾಂಕ್ರೋಫ್ಟಿ' 'ಬ್ರೂಗಿಯಾ ಮಲಾಯಿ' ಎಂಬ ಪರಾವಲಂಬಿ ನೂಲಿನಂತಹ ಹುಳುಗಳನ್ನು ಅವರ ದೇಹಕ್ಕೆ ವರ್ಗಾಯಿಸುತ್ತವೆ.

ಈ ಹುಳುಗಳು ರಕ್ತ ಮತ್ತು ದುಗ್ಧರಸನಾಳಗಳಲ್ಲಿ ಬೆಳೆದು, ದ್ರವ ಹರಿಯದಂತೆ ತಡೆಯುತ್ತವೆ, ಇದರಿಂದ ಕೈ ಕಾಲುಗಳು ಆನೆಯ ಕಾಲಿನಂತೆ ದಪ್ಪವಾಗುವ ಮೂಲಕ ಶಾಶ್ವತವಾಗಿ ಆನೆಕಾಲು ರೋಗಕ್ಕೆ ಕಾರಣವಾಗುತ್ತಿದ್ದು, ಜಿಲ್ಲೆಯಲ್ಲಿ ರೋಗ ತಡೆಗಾಗಿ ಹಾಗೂ ಆರಂಭದಲ್ಲಿಯೇ ಗುರ್ತಿಸಲು ಮೇಲಾಧಿಕಾರಿಗಳ ನಿರ್ದೇಶನದಂತೆ ಆಯ್ದ ಸ್ಥಳಗಳಲ್ಲಿ ರಾತ್ರಿ ವೇಳೆ ರಕ್ತ ಲೇಪನ ಕಾರ್ಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಅಲ್ಲದೆ ಸಾಮಾನ್ಯವಾಗಿ ಆನೆಕಾಲು ರೋಗ ವ್ಯಕ್ತಿಯಲ್ಲಿ ಕಂಡುಬರಲು ಧಿರ್ಘಾವಧಿ ತೆಗೆದುಕೊಳ್ಳುತ್ತದೆ. ಆರಂಭದಲ್ಲಿ ಜ್ವರ ಮತ್ತು ಚಳಿ, ಚರ್ಮದ ಮೇಲೆ ಸೋಂಕು ಹಾಗೂ ಕಾಲುಗಳು, ತೋಳುಗಳು, ಸ್ತನಗಳು ಅಥವಾ ಜನನಾಂಗದ ಭಾಗಗಳಲ್ಲಿ ಊತ ಕಂಡುಬರುತ್ತದೆ. ಕ್ರಮೇಣ ಚರ್ಮವು ದಪ್ಪವಾಗಿ, ಗಟ್ಟಿಯಾಗಿ, ಗರುಸಾಗಿ ಆನೆ ಚರ್ಮದಂತೆ ಕಾಣಿಸುವುದು.

ಇದರಿಂದ ಅತಿಯಾದ ನೋವು ಮತ್ತು ನಡೆಯಲು ಕಷ್ಟವಾಗುವುದು. ಇದನ್ನು ರೋಗ ಲಕ್ಷಣಗಳನುಸಾರ ನಿರ್ವಹಣೆ ಚಿಕಿತ್ಸೆ ಮಾತ್ರ ಸಾಧ್ಯವಿದ್ದು, ಸಂಪೂರ್ಣ ಗುಣಪಡಿಸಲು ಕಷ್ಟಕರ. ಈ ಹಿನ್ನಲೆ ಮನೆಯ ಸುತ್ತಲು ಚರಂಡಿ, ತಿಪ್ಪೆಗಳ ಹತ್ತಿರ ಅನುಪಯುಕ್ತ ನೀರು ನಿಲ್ಲದಂತೆ ಹಾಗೂ ಮನೆ ಹೊಲ, ಗದ್ದೆಗಳಲ್ಲಿ ಕೆಲಸ ಮಾಡುವಾಗ ಸೊಳ್ಳೆಯಿಂದ ಕಚ್ಚಿಸಿಕೊಳ್ಳದಂತೆ ಜಾಗೃತಿ ವಹಿಸಲು ವಿನಂತಿಸಿದರು. ಈ ಸಂಧರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ವಸಂತಕುಮಾರಿ, ಆರೋಗ್ಯ ನಿರೀಕ್ಷಣಾಧಿಕಾರಿ ಬಿಬ್ಬಿ ಮಾಚಯ್ಯ, ಪ್ರಯೋಗಾಲಯ ತಂತ್ರಜ್ಞ ವಿನಯ್, ಆಶಾ ಕಾರ್ಯಕರ್ತೆ ರಾಧಾ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

# ತಾಯಮ್ಮ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳ ಸಾಧನೆ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ತಾಲೂಕಿನ ಚಬನೂರ ಗ್ರಾಮದ ಕ್ರಾಸ್ ನಲ್ಲಿರುವ ಶ್ರೀ ತಾಯಮ್ಮ ಆಂಗ್ಲ ಮಾಧ್ಯಮ ಶಾಲೆಗೆ 2025-26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ.**



ಕುಮಾರ ಸಿದ್ಧಾರ್ಥ ಶ್ರೀಶೈಲ ಪಡಶೆಟ್ಟಿ 617 ( ಶೇ98. 72) ಶಾಲೆಗೆ ಪ್ರಥಮ ಹಾಗೂ ರಾಜ್ಯಕ್ಕೆ 9 ನೇ ಸ್ಥಾನ ಪಡೆದುಕೊಂಡಿದ್ದಾನೆ. ಕುಮಾರ ಸೋಮಶೇಖರ ನಾಡಗೌಡ 601 ಶೇ (96.16) ಶಾಲೆಗೆ ದ್ವಿತೀಯ, ಕುಮಾರ ಯಶವಂತ ರಾಮನಗೌಡ ಚೌದ್ರಿ 598 ಶೇ (95.72) ಶಾಲೆಗೆ ತೃತೀಯ, ಕುಮಾರ ಅನೀಲ ಉಪ್ಪಾರ 593 ಶೇ( 94.88), ಕುಮಾರ ಪವನಕುಮಾರ ಬಜ್ಜಿ 588 ಶೇ( 94.08 ) ಕುಮಾರಿ ಭಾಗ್ಯಶ್ರೀ ತಿಳಗೂಳ 584 ಶೇ( 93.44), ಕುಮಾರ ಸಂದೀಪ ಬೂದಿಹಾಳ 568 ಶೇ( 90.88 ), ಕುಮಾರ ಶರತ್ ಹೂಗಾರ 527 ಶೇ ( 84.32), ಕುಮಾರ ಭರತ ಬಿರಾದಾರ 522 ಶೇ( 83.52), ಕುಮಾರ ಪ್ರಜ್ವಲ್ ಹೊಸಮನಿ 486 ಶೇ(77.76) ಅಂಕಗಳನ್ನು ಪಡೆದು ಶಾಲೆಗೆ ಕೀತಿ ತಂದಿದ್ದಾರೆ.

ಪರೀಕ್ಷೆಗೆ ಕುಳಿತ 10 ವಿದ್ಯಾರ್ಥಿಗಳಲ್ಲಿ7 ವಿದ್ಯಾರ್ಥಿಗಳು 90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡು ಪಾಸಾಗಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಶರಣಯ್ಯ ಹಿರೇಮಠ, ಉಪಾಧ್ಯಕ್ಷರಾದ ಶಶಿಧರ ಹಯ್ಯಾಳ,ಶಾಲೆಯ ಮುಖ್ಯೋಪಾಧ್ಯಯರಾದ ಬಿ ಎನ್ ಸಿದರಡ್ಡಿ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ಉಷ್ಣಾಘಾತ (Heat Stroke) :ರಾಯಚೂರು ಅಂದ್ರೆ ಸೂರ್ಯನ ಹೆಡ್ ಆಫೀಸ್)

**ನೈಜ್ಯ ದೆಸೆ ನ್ಯೂಸ್**

**ರಾಯಚೂರು : ಬಿಸಿಲುನಾಡಿನ ಜನರಿಗೆ ಎಚ್ಚರಿಕೆ ಗಂಟೆ ರಾಯಚೂರು ಎಂದರೆ ಸೂರ್ಯನ ಕೇಂದ್ರ ಕಚೇರಿ (Head office) ಎಂಬ ಮಾತಿದೆ. ಆದರೂ ಸತ್ಯ ಹೇಳಬೇಕೆಂದರೆ, ಈಗಿನ ಬಿಸಿಲಿನ ತಾಪ ಸಣ್ಣ ವಿಷಯವಲ್ಲ. ನಾವು ಬಿಸಿಲುನಾಡಿನ ಮಕ್ಕಳು ಎಂದು ಹೆಮ್ಮೆಪಡುತ್ತೇವೆ. ಆದರೆ ಪ್ರಖರ ಸೂರ್ಯನ ಜೊತೆ ಸೆಣಸಾಟಕ್ಕೆ ಇಳಿಯುವುದು ಸ್ವಲ್ಪ ಅಪಾಯಕಾರಿ ಕೃತ್ಯವೇ ಸರಿ. ವೈಜ್ಞಾನಿಕವಾಗಿ ಹೇಳುವುದಾದರೆ, ಉಷ್ಣಾಘಾತ (Heat Stroke) ಅಥವಾ ಬಿಸಿಲು ಹೊಡೆತ (Sun Stroke) ಎಂದರೆ ನಮ್ಮ ದೇಹದ ತಾಪಮಾನ ನಿಯಂತ್ರಣ ವ್ಯವಸ್ಥೆಯು (Temperature control system) ಸಂಪೂರ್ಣವಾಗಿ ವಿಫಲವಾಗುವ ಒಂದು ಸ್ಥಿತಿ.**




ಸಾಮಾನ್ಯವಾಗಿ ನಮ್ಮ ದೇಹದ ತಾಪಮಾನ ನಲವತ್ತು ಡಿಗ್ರಿ ಸೆಲ್ಸಿಯಸ್ (40ಲಿಅ) ಮೀರಿ ಹೋದಾಗ, ದೇಹವು ತಂಪಾಗಲು ಬೆವರುವುದು ಕೂಡ ನಿಂತುಹೋಗಬಹುದು. ಆಗ ಮೆದುಳು (Brain) ಮತ್ತು ದೇಹದ ನಿಯಂತ್ರಣ ವ್ಯವಸ್ಥೆಯು ಮಂದವಾಗುತ್ತದೆ. ಇದು ಕೇವಲ ಸಾಮಾನ್ಯ ಬಿಸಿಲಿನ ಝಳವಲ್ಲ, ಬದಲಾಗಿ ತಕ್ಷಣ ಗಮನಹರಿಸಬೇಕಾದ ವೈದ್ಯಕೀಯ ತುರ್ತು ಪರಿಸ್ಥಿತಿಯಾಗಿದೆ (Medical emergency). ನಮ್ಮ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗಿ ನಿರ್ಜಲೀಕರಣ (Dehydration) ಉಂಟಾದಾಗ, ಅಂದರೆ ದೇಹದಲ್ಲಿ ದ್ರವಾಂಶದ ಕೊರತೆ ಎದುರಾದಾಗ ಈ ಪರಿಸ್ಥಿತಿ ಇನ್ನಷ್ಟು ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಬಿಸಿಲಿನ ದುಷ್ಪರಿಣಾಮಗಳನ್ನು ನಮ್ಮದೇ ಶೈಲಿಯಲ್ಲಿ ಹೇಳುವುದಾದರೆ, ವಿಪರೀತ ಬಿಸಿಲಿಗೆ ಹೋದಾಗ ತಲೆ ಸುತ್ತುವುದು ಮತ್ತು ಜಗತ್ತೇ ಗಿರಕಿ ಹೊಡೆಯುತ್ತಿರುವಂತಹ ಅನುಭವವಾಗುವುದು (Dizziness) ಸಾಮಾನ್ಯ.

ಚರ್ಮವು ಸಂಪೂರ್ಣವಾಗಿ ಒಣಗುತ್ತದೆ ಮತ್ತು ಬೆವರು ಬಾರದೆ ಬಿಸಿಲಿನ ತಾಪ ನೇರವಾಗಿ ತಟ್ಟುತ್ತದೆ. ಈ ಸಮಯದಲ್ಲಿ ಹೃದಯದ ಬಡಿತ (Heart beat) ತೀವ್ರವಾಗುತ್ತದೆ ಹಾಗೂ ನಾವೆಲ್ಲಿದ್ದೇವೆ, ಏನು ಮಾಡುತ್ತಿದ್ದೇವೆ ಎಂಬ ಗೊಂದಲವೂ (Confusion) ಮೆದುಳಿನಲ್ಲಿ ಮೂಡುತ್ತದೆ. ತೀವ್ರತರವಾದ ಪ್ರಕರಣಗಳಲ್ಲಿ ವ್ಯಕ್ತಿಯು ಪ್ರಜ್ಞೆ ಕಳೆದುಕೊಂಡು ಮೂರ್ಛೆ ಹೋಗುವ (Unconscious) ಸಾಧ್ಯತೆಯೂ ಇರುತ್ತದೆ. ಇಂಥ ಉರಿಬಿಸಿಲಿನಲ್ಲಿ ಫ್ಯಾಷನ್ ಶೈಲಿಗಿಂತ ಸುರಕ್ಷಿತ ಶೈಲಿಗೆ (Safe style) ನಾವು ಆದ್ಯತೆ ನೀಡಬೇಕು. ಬಿಳಿ ಅಥವಾ ತಿಳಿ ನೀಲಿಯಂತಹ ತಿಳಿ ಬಣ್ಣದ ಉಡುಪುಗಳನ್ನು (Light color clothes) ಧರಿಸುವುದು ಸೂಕ್ತ. ದೇಹಕ್ಕೆ ಗಾಳಿ ಆಡುವಂತಹ ಸಡಿಲವಾದ ಮತ್ತು ಶುದ್ಧ ಹತ್ತಿಯ ಬಟ್ಟೆಗಳನ್ನು (Loose cotton dress) ಬಳಸಬೇಕು.

ಹೊರಗೆ ಹೋಗುವಾಗ ತಲೆಗೆ ಟೋಪಿ (Cap) ಅಥವಾ ಹತ್ತಿಯ ವಸ್ತ್ರವನ್ನು (Towel) ಕಟ್ಟಿಕೊಳ್ಳುವುದು ಕಡ್ಡಾಯ. ಕಪ್ಪು ಬಟ್ಟೆಗಳು (Black dress) ಸೂರ್ಯನ ಶಾಖವನ್ನು ಆಯಸ್ಕಾಂತದಂತೆ (Magnet) ವೇಗವಾಗಿ ಸೆಳೆಯುವುದರಿಂದ ಅವುಗಳನ್ನು ಆದಷ್ಟು ದೂರವಿಡಬೇಕು. ಈ ಸಮಯದಲ್ಲಿ ನಾವು ಸೇವಿಸುವ ಆಹಾರ ದೇಹವನ್ನು ತಂಪಾಗಿರಿಸಬೇಕೇ ಹೊರತು, ದೇಹದ ಉಷ್ಣತೆಯನ್ನು ಹೆಚ್ಚಿಸುವಂತಿರಬಾರದು. ಬೆವರಿನ ಮೂಲಕ ನೀರು ನಷ್ಟವಾಗುವುದರಿಂದ, ದಿನಕ್ಕೆ ಕನಿಷ್ಠ ಮೂರರಿಂದ ನಾಲ್ಕು ಲೀಟರ್ ನೀರು ಕುಡಿಯಲೇಬೇಕು.

ಎಳನೀರು (Tender coconut),ಕಲ್ಲಂಗಡಿ ಹಣ್ಣು (Watermelon) ಮತ್ತು ನಿಂಬೆ ಪಾನಕವನ್ನು (Lemon juice) ಹೆಚ್ಚು ಸೇವಿಸಬೇಕು. ಅದರಲ್ಲೂ ಮಜ್ಜಿಗೆಯಂತೂ (Buttermilk) ನಮ್ಮ ರಾಯಚೂರಿನ ನೈಸರ್ಗಿಕ ಹವಾನಿಯಂತ್ರಕವೇ (Original AC) ಸರಿ. ದೇಹಕ್ಕೆ ತೊಂದರೆ ನೀಡುವ ಅತಿ ಮಸಾಲೆಯುಕ್ತ (Spicy) ಮತ್ತು ಎಣ್ಣೆಯುಕ್ತ (Oily) ಕರಿದ ಪದಾರ್ಥಗಳನ್ನು ತ್ಯಜಿಸುವುದು ಒಳಿತು. ಜೀರ್ಣಕ್ರಿಯೆಗೆ ಸುಲಭವಾದ ಹಾಗೂ ನೀರಿನ ಅಂಶ ಹೆಚ್ಚಿರುವ ಹಗುರವಾದ ಆಹಾರ ಸೇವನೆ ಈ ಕಾಲಕ್ಕೆ ಅತ್ಯುತ್ತಮ. ಸೂರ್ಯನ ಜೊತೆ ನಾವು ಸ್ನೇಹ ಮಾಡಬೇಕೇ ವಿನಃ ಹೋರಾಟವಲ್ಲ (Fight). ಬೆಳಗ್ಗೆ ಹನ್ನೊಂದು ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೆ ಬಿಸಿಲಿನ ತೀವ್ರತೆ ಅತ್ಯಂತ ಗರಿಷ್ಠ ಮಟ್ಟದಲ್ಲಿ ಇರುವುದರಿಂದ, ಆ ಸಮಯದಲ್ಲಿ ಆದಷ್ಟು ಹೊರಗೆ ಹೋಗುವುದನ್ನು ತಪ್ಪಿಸಬೇಕು.

ಮರದ ನೆರಳಿನಲ್ಲಿ (Shade) ಅಥವಾ ತಂಪಾದ ಮನೆಯೊಳಗೆ ಇರುವುದು ಆರೋಗ್ಯಕ್ಕೆ ಉತ್ತಮ. ಅನಿವಾರ್ಯವಾಗಿ ಹೊರಗೆ ಹೋಗಬೇಕಾದ ಸಂದರ್ಭ ಬಂದರೆ ಛತ್ರಿ (Umbrella) ಬಳಸುವುದು ಹಾಗೂ ನೀರಿನ ಬಾಟಲಿಯನ್ನು (Water bottle) ಯಾವಾಗಲೂ ಜೊತೆಗೆ ಒಯ್ಯುವುದು ಮರೆಯಬಾರದು. ಸಣ್ಣ ಮಕ್ಕಳು ಮತ್ತು ವಯಸ್ಸಾದ ವೃದ್ಧರ ದೇಹವು ಉಷ್ಣತೆಯನ್ನು ತಡೆದುಕೊಳ್ಳುವ ಶಕ್ತಿ ಕಡಿಮೆ ಹೊಂದಿರುವುದರಿಂದ, ಅವರ ಬಗ್ಗೆ ಮನೆಯವರು ಹೆಚ್ಚಿನ ಕಾಳಜಿ (Extra care) ವಹಿಸುವುದು ಅತ್ಯಗತ್ಯ.

ಒಂದು ವೇಳೆ ಯಾರಿಗಾದರೂ ಉಷ್ಣಾಘಾತದ ಲಕ್ಷಣಗಳು ಕಂಡುಬಂದರೆ, ತಕ್ಷಣ ಮಾಡಬೇಕಾದ ಪ್ರಥಮ ಚಿಕಿತ್ಸೆ (First aid) ಎಂದರೆ ಅವರನ್ನು ನೆರಳಿರುವ ಅಥವಾ ತಂಪಾದ ಜಾಗಕ್ಕೆ ಸ್ಥಳಾಂತರಿಸುವುದು. ಅವರ ದೇಹದ ಉಷ್ಣತೆಯನ್ನು ಕಡಿಮೆ ಮಾಡಲು ಒದ್ದೆ ಬಟ್ಟೆಯಿಂದ ಮೈ ಒರೆಸಬೇಕು ಅಥವಾ ತಣ್ಣೀರು ಎರಚಬೇಕು. ಪ್ರಜ್ಞೆ ಇದ್ದರೆ ಕುಡಿಯಲು ನೀರು ಅಥವಾ ಎಲೆಕ್ಟ್ರೋಲೈಟ್ (Electrolyte) ಪಾನೀಯಗಳನ್ನು ನೀಡಬೇಕು. ಪರಿಸ್ಥಿತಿ ಗಂಭೀರವಾಗಿದ್ದರೆ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯುವುದು ಪ್ರಾಣಾಪಾಯವನ್ನು ತಪ್ಪಿಸಲು ಇರುವ ಸೂಕ್ತ ಮಾರ್ಗವಾಗಿದೆ. ಈ ನಿಟ್ಟಿನಲ್ಲಿ ಉಷ್ಣಾಘಾತದ ಸಮಯದಲ್ಲಿ ಕೆಲವು ಅಪಾಯದ ಮುನ್ಸೂಚನೆಗಳನ್ನು (Danger signs) ನಾವು ಅರಿತಿರುವುದು ಬಹಳ ಮುಖ್ಯ ಹಾಗೂ ಇವುಗಳನ್ನು ನಿರ್ಲಕ್ಷಿಸುವಂತೆಯೇ ಇಲ್ಲ.

ತೀವ್ರವಾದ ವಾಂತಿ (Severe vomiting), ಉಸಿರಾಡಲು ಕಷ್ಟವಾಗುವುದು (Difficulty in breathing), ಎದೆನೋವು (Chest pain), ಮಾತು ತೊದಲುವಿಕೆ ಅಥವಾ ವಿಚಿತ್ರವಾಗಿ ವರ್ತಿಸುವುದು (Altered mental state), ಮೂತ್ರದ ಬಣ್ಣ ಕಡು ಹಳದಿಯಾಗುವುದು ಅಥವಾ ಮೂತ್ರ ಬಾರದಿರುವುದು (Dark yellow urine or no urine), ಮತ್ತು ವಿಪರೀತ ಸುಸ್ತು (Extreme fatigue) ಕಂಡುಬಂದರೆ ಅದು ಗಂಭೀರ ಪರಿಸ್ಥಿತಿಯ ಸಂಕೇತವಾಗಿದೆ. ಇಂತಹ ಅಪಾಯದ ಲಕ್ಷಣಗಳು ಕಾಣಿಸಿಕೊಂಡಾಗ ಅಥವಾ ದೇಹದ ಉಷ್ಣತೆ ಎಷ್ಟೇ ಪ್ರಯತ್ನಿಸಿದರೂ ಕಡಿಮೆಯಾಗದಿದ್ದಾಗ ಮತ್ತು ವ್ಯಕ್ತಿಯು ಪ್ರಜ್ಞೆ ತಪ್ಪಿದಾಗ (Loss of consciousness), ತಕ್ಷಣವೇ ಮನೆಯಲ್ಲಿಯೇ ಕಾಲಹರಣ ಮಾಡದೆ ಕೂಡಲೇ ವೈದ್ಯರನ್ನು ಭೇಟಿಯಾಗಬೇಕು (Meet doctor immediately). ಇದು ಜೀವ ಉಳಿಸುವ ಅತಿ ಮುಖ್ಯ ಹೆಜ್ಜೆಯಾಗಿದೆ. ಇದೇ ನಿಟ್ಟಿನಲ್ಲಿ, ಸಾರ್ವಜನಿಕರ ಆರೋಗ್ಯ ರಕ್ಷಣೆಯ ಹಿತದೃಷ್ಟಿಯಿಂದ ಈಗಾಗಲೇ ಅನೇಕ ಸರ್ಕಾರಿ ಆಸ್ಪತ್ರೆಗಳು (Government hospitals) ತಮ್ಮ ವ್ಯಾಪ್ತಿಯಲ್ಲಿ ಉಷ್ಣಾಘಾತದಿಂದ ಬಳಲುವ ವ್ಯಕ್ತಿಗಳಿಗೆ ತುರ್ತು ಚಿಕಿತ್ಸೆ ನೀಡಲು ವಿಶೇಷ ವಾರ್ಡ್‌ಗಳನ್ನು (Special wards) ಸಿದ್ಧಪಡಿಸಿಕೊಂಡಿವೆ.

ಯಾವುದೇ ತುರ್ತು ಪರಿಸ್ಥಿತಿ ಎದುರಾದರೂ ಸಾರ್ವಜನಿಕರು ಆತಂಕಪಡದೆ, ತಕ್ಷಣವೇ ತಮ್ಮ ಹತ್ತಿರದ ಸರ್ಕಾರಿ ಆಸ್ಪತ್ರೆಗಳನ್ನು ಸಂಪರ್ಕಿಸಿ ಈ ಸೌಲಭ್ಯದ ಸದುಪಯೋಗವನ್ನು ಪಡೆದುಕೊಳ್ಳಬೇಕು. ಇದರ ಜೊತೆಗೆ ನಾವು ಅರಿಯಬೇಕಾದ ಮತ್ತೊಂದು ಮುಖ್ಯ ವಿಚಾರವೆಂದರೆ ಪರಿಸರ ಕಾಳಜಿ (Environmental concern). ದಿನೇ ದಿನೇ ಹೆಚ್ಚುತ್ತಿರುವ ಈ ತಾಪಮಾನಕ್ಕೆ ಕೇವಲ ಭೌಗೋಳಿಕ ಕಾರಣಗಳಷ್ಟೇ ಅಲ್ಲ, ನಮ್ಮ ಪರಿಸರ ನಾಶವೂ ಪ್ರಮುಖ ಕಾರಣವಾಗಿದೆ. ಮರಗಳನ್ನು ಕಡಿಯುವುದು ಮತ್ತು ಕಾಂಕ್ರೀಟ್ ಕಟ್ಟಡಗಳನ್ನು ಬೆಳೆಸುವುದು ಈ ಬಿಸಿಲಿನ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಮುಂದಿನ ಪೀಳಿಗೆಗೆ ಈ ಭೂಮಿಯನ್ನು ವಾಸಯೋಗ್ಯವಾಗಿ ಉಳಿಸಬೇಕೆಂದರೆ ನಾವು ಹೆಚ್ಚು ಮರಗಳನ್ನು ಬೆಳೆಸುವತ್ತ ಗಮನ ಹರಿಸಬೇಕು.

ನಮ್ಮ ಸುತ್ತಮುತ್ತಲಿನ ಪರಿಸರವನ್ನು ತಂಪಾಗಿರಿಸಿಕೊಂಡರೆ ಮಾತ್ರ ಸೂರ್ಯನ ಪ್ರಖರತೆಯನ್ನು ಸ್ವಲ್ಪ ಮಟ್ಟಿಗಾದರೂ ಎದುರಿಸಲು ಸಾಧ್ಯ. ನಮ್ಮ ಊರಿನಲ್ಲಿ ಸೂರ್ಯನಿಗೆ ಬೇಸಿಗೆಯಲ್ಲಿ ರಜೆ ಕೇಳಿದರೆ, ನೀವೇ ಬಿಸಿಲಿಗೆ ಹೊಂದಿಕೊಳ್ಳಿ (Adjust), ನನ್ನದು ಯಾರಿಗೂ ರಿಯಾಯಿತಿ ಇಲ್ಲದ ಪೂರ್ಣಾವಧಿ ಕರ್ತವ್ಯ (Full time duty) ಎಂದು ಹೇಳುತ್ತಾನಂತೆ ಎಂಬ ಹಾಸ್ಯದ ಮಾತಿದೆ. ಆದರೆ ನಾವು ಕೂಡ ಪರಿಸ್ಥಿತಿಗೆ ತಕ್ಕಂತೆ ಜಾಣರಾಗಬೇಕಲ್ಲವೇ? ರಾಯಚೂರು ಜಿಲ್ಲೆ ಬಿಸಿಲಿನ ಹೆಮ್ಮೆ ನಿಜ, ಆದರೆ ಇದೇ ಬಿಸಿಲು ನಮ್ಮ ಆರೋಗ್ಯಕ್ಕೆ ದೊಡ್ಡ ಸವಾಲು ಕೂಡ ಹೌದು. ನಾವು ಬಿಸಿಲಿನ ಮಕ್ಕಳು ಎಂದರೆ, ಆ ಬಿಸಿಲನ್ನು ಸಮರ್ಥವಾಗಿ ನಿಭಾಯಿಸುವುದು ಕೂಡ ನಮ್ಮದೇ ಜವಾಬ್ದಾರಿಯಾಗಿದೆ. ಬಿಸಿಲನ್ನು ಎಂದಿಗೂ ಹಗುರವಾಗಿ ಪರಿಗಣಿಸಬಾರದು (Underestimate), ಆಯಾಸವಾದಾಗ ದೇಹ ನೀಡುವ ಸೂಚನೆಗಳನ್ನು (Signals) ನಿರ್ಲಕ್ಷಿಸಬಾರದು (Ignore) ಮತ್ತು ಸುರಕ್ಷತಾ ಕ್ರಮಗಳನ್ನು (Safety measures) ಕಡ್ಡಾಯವಾಗಿ ಪಾಲಿಸಬೇಕು. ನೆನಪಿರಲಿ, ಬಿಸಿಲಿಗೆ ಎದೆಯೊಡ್ಡುವುದು ಶೌರ್ಯವಲ್ಲ, ಬಿಸಿಲನ್ನು ಅರಿತು ಗೆಲ್ಲುವುದು ನಿಜವಾದ ಜ್ಞಾನ.

**ಲೇಖನ: ಲಾಜರ್ ಸಿರಿಲ್. ಜಿ**

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.